ಪ್ರೊ. ಸಾ. ಕೃ. ರಾ-ಸಮಗ್ರ ಸಾಹಿತ್ಯ-೨೪

ಶಾಂತಳೆ

(ನೃತ್ಯ ರೂಪಕ)

ರಚನೆ:

ಪ್ರೊ. ಎಸ್. ಕೆ. ರಾಮಚಂದ್ರರಾವ್

ಸುರಮಾ ಪ್ರಕಾಶನ

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ(ರಿ)

ಬೆಂಗಳೂರು-೧೧

ಶಾಂತಳೆ

(ನೃತ್ಯರೂಪಕ)

★

ರಚನೆ :

ಪ್ರೊ. ಎಸ್. ಕೆ. ರಾಮಚಂದ್ರರಾವ್

★

Santala, a dance drama, written by Prof S. K. Ramachandra Rao. Reprinted by Dr. S. R. Sudarshan, for Surama Prakashana, the publication wing of the Prof S. K. Ramachandra Rao Memorial Trust®, 305, 6th cross, I Block, Jayanagar, Bangalore 560011. Phone: 080-26563957

First Edition: 1970
Second Edition: 2013

ವೀರೇಂದ್ರ ಪಾಟೀಲ್
ಮುಖ್ಯಮಂತ್ರಿ

"ವಿಧಾನ ಸೌಧ"
ಬೆಂಗಳೂರು–೧

ದಿನಾಂಕ : ಡಿಸೆಂಬರ್ ೧೯೭೦

ಸಂದೇಶ

ಶ್ರೀ ಎಸ್. ಕೆ. ರಾಮಚಂದ್ರರಾಯರಿಂದ ವಿರಚಿತವಾದ "ಶಾಂತಳೆ" ಎಂಬ ನೃತ್ಯನಾಟಕವು ಅವಲೋಕನೆಗೆ ಎಷ್ಟು ರಮ್ಯವಾಗಿದೆಯೋ ಅದನ್ನು ರಂಗಭೂಮಿಗೆ ತಂದು ಪ್ರೇಕ್ಷಕರನ್ನು ಆನಂದಗೊಳಿಸುವುದಕ್ಕೆ ಇನ್ನಷ್ಟು ಮನೋಜ್ಞವಾಗಿದೆ. ಈ ನೃತ್ಯ ನಾಟಕದ ಕೃತಿಯು ಕನ್ನಡಿಗರ ಅಭಿಮಾನಕ್ಕೆ ಪಾತ್ರವಾಗಲೆಂದು ಆಶಿಸುತ್ತೇನೆ. ಬೆಂಗಳೂರು ವಿದ್ಯಾರ್ಥಿ ಸಂಘದವರು ಇದನ್ನು ಪ್ರಕಟಿಸಿರುವುದು ಅಭಿನಂದನೀಯ.

ವೀರೇಂದ್ರ ಪಾಟೀಲ

ಕೃತಜ್ಞತೆ

ನನ್ನ ನೀರಸವಾದ ಅಕ್ಷರಕ್ಕೆ ದೃಶ್ಯ, ಶ್ರವ್ಯಕಳೆಗಳನ್ನು ತುಂಬಿಸಿ ರಸಮಯವನ್ನಾಗಿಸಿದ ನನ್ನ ಸಹೃದಯ ಮಿತ್ರರೆಲ್ಲರಿಗೆ ನನ್ನ ಕೃತಜ್ಞತೆಯನ್ನು ಸೂಚಿಸುತ್ತಿದ್ದೇನೆ. ಬೆಂಗಳೂರು ವಿದ್ಯಾರ್ಥಿಗಳ ಸಾಂಸ್ಕೃತಿಕ ಸಂಘದ ಒತ್ತಾಯವಿರದಿದ್ದರೆ ಬಹುಶಃ ನಾನು ಇದನ್ನು ರಚಿಸುತ್ತಿರಲಿಲ್ಲ ; ಸಂಘಕ್ಕೆ ನನ್ನ ಧನ್ಯವಾದಗಳು. ಅದರಲ್ಲಿಯೂ ಶ್ರೀ ಶೆಟ್ಟಿಯವರ ಸೌಹಾರ್ದ, ಸಹನೆ, ಸಾವಧಾನಗಳಿಗೆ ನಾನು ಋಣಿ.

ಎಸ್. ಕೆ. ರಾಮಚಂದ್ರರಾವ್

ಪಾತ್ರ ವಿವರ

ಶಾಂತಳೆ : ವಿಷ್ಣುವರ್ಧನನ ಪಟ್ಟಮಹಿಷಿ

ವಿಷ್ಣುವರ್ಧನ : ಹೊಯ್ಸಳರ ಅರಸ

ಮಾಚಿಕಬ್ಬೆ : ಶಾಂತಳೆಯ ತಾಯಿ

ಮಾರಸಿಂಗಯ್ಯ : ಶಾಂತಳೆಯ ತಂದೆ

ಪ್ರಭಾಚಂದ್ರ : ಜೈನಾಚಾರ್ಯರು, (ಶಾಂತಳೆಯ ಧರ್ಮ ಗುರು)

ಲಕ್ಷ್ಮಿದೇವಿ : ವಿಷ್ಣುವರ್ಧನನ ಅನಂತರದ ಪಟ್ಟಮಹಿಷಿ.

ಮದನಿಕೆ: ಒಬ್ಬಳು .
ಇನ್ನೊಬ್ಬಳು .
ಮತ್ತೊಬ್ಬಳು .
ಮಗುದೊಬ್ಬಳು .
ಮತ್ತೂ ಒಬ್ಬಳು .

ಶಿಲ್ಪಿ .

ಚೋಳರಾಜ .

ಚಂದಲೆ : ಶಾಂತಳೆಯ ಗೆಳತಿ

ಶಿಷ್ಯ .

ಅಂಗರಕ್ಷಕ : ಒಬ್ಬ .
ಇನ್ನೊಬ್ಬ .

ಬಾಲಶಾಂತಳೆ .

ಪುರೋಹಿತರು, ನಾಗರಿಕರು, ಸೈನಿಕರು, ಇತ್ಯಾದಿ.

ಮೊದಲಲ್ಲಿ ನಾಲ್ಕು ಮಾತು

— ೧ —

ಕನ್ನಡನಾಡಿನ ಇತಿಹಾಸದಲ್ಲಿ ಶಾಂತಳೆಯ ಹೆಸರು ದೃಢವಾಗಿ ನಿಂತಿದೆ. ದಕ್ಷಿಣ ಚಕ್ರವರ್ತಿಗಳೆಂದು ಮೆರೆದ ಹೊಯ್ಸಳ ರಾಜರಲ್ಲಿ ಅತಿ ಪ್ರಖ್ಯಾತನಾದವನು ವಿಷ್ಣುವರ್ಧನ-ಬಿಟ್ಟಿದೇವ (೧೧೧೧-೧೧೪೧); ಆತನ "ಪಟ್ಟಮಹಾದೇವಿ, ಪಿರಿಯರಸಿ" ಶಾಂತಳೆ (ಅಥವಾ ಸಾಂತಲದೇವಿ). ಈಕೆಯ ಕಲಾಭಿರುಚಿ, ಸಾತ್ತ್ವಿಕೋತ್ಸಾಹಗಳ ಭೌತಪ್ರತೀಕಗಳಾಗಿ ಬೇಲೂರಿನ ಶಿಲಾಬಾಲಿಕೆಯರು ನಿಂತಿದ್ದಾರೆಂದು ನಂಬಿಕೆ. ಈಕೆಯು 'ಗೀತವಾದ್ಯಸೂತ್ರಧಾರೆ'ಯೆಂದೇನೋ ಶಾಸನದ ಬರಹವಿದೆ. ಆಕೆಯ ರೂಪಲಾವಣ್ಯ, ಶೀಲಸಂಪತ್ತು, ಧರ್ಮಶ್ರದ್ಧೆಯ ವಿಚಾರವಾಗಿ ಹಲವಾರು ಶಾಸನ ಪದ್ಯಗಳಿವೆ. ಅಂತೂ ಕರ್ಣಾಟಕದ ಪ್ರಖ್ಯಾತ ರಮಣಿಯರಲ್ಲಿ ಶಾಂತಳೆಗೆ ವಿಶಿಷ್ಟವಾದೊಂದು ಸ್ಥಾನ ಎಂಟುನೂರು ವರ್ಷಗಳಿಗೂ ಮೀರಿ ಉಳಿದು ಬಂದಿದೆ. ಆಕೆಯೆಂದರೆ ನಾಡಿಗೊಂದು ಹೆಮ್ಮೆಯಾಗಿ ಪರಿಣಮಿಸಿದೆ.

ಇಂಥ ಹೆಂಗಳೆಯೊಬ್ಬಳನ್ನು ಕುರಿತು ಅನೇಕ ಕಥೆಗಳೂ, ಕಾದಂಬರಿಗಳೂ, ಕವಿತೆಗಳೂ, ಕಲ್ಪನೆಗಳೂ ಪ್ರವೃತ್ತವಾಗಿರುವುದು ಆಶ್ಚರ್ಯವೇನಲ್ಲ. ಇದರಲ್ಲೆಲ್ಲ ಇತಿಹಾಸ ಶುದ್ಧಿಯನ್ನು ಅರಸಲೆತ್ನಿಸುವುದು ಅನುಚಿತ;

'ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ'. ಕಾವ್ಯಪ್ರಪಂಚದಲ್ಲಿ ಕಲ್ಪನೆಗೆ, ರಸನಿಷ್ಪತ್ತಿಗೆ ಪ್ರಮುಖಪಟ್ಟ. ಇಲ್ಲಿ ಇತಿಹಾಸವನ್ನು ಅಳತೆಗೋಲಾಗಿ ಬಳಸಲಾಗದು. ಶಾಂತಳೆಯ ವಿಚಾರದಲ್ಲಿ ಆಗಿರುವಂತೆ ಇತಿಹಾಸ ಅಸ್ಪಷ್ಟವಾಗಿದ್ದರೂ ರಸಮಯವಾದ ಕಲ್ಪನೆಯೇ ಗತಿ.

೨

ಈ ನನ್ನ ರೂಪಕವೂ ಕಲ್ಪನಾಪ್ರಧಾನವಾದ ಕೃತಿಯೇ. ಶಾಂತಳೆಯ ವಿಚಾರವಾಗಿ ಹೊರಬಂದಿರುವ ಹಿಂದಿನ ಕಥೆ ಕಾದಂಬರಿಗಳಲ್ಲಿ ಕಾಣಬರದಿರುವ ದೃಷ್ಟಿಯೊಂದನ್ನು ಎತ್ತಿಕೊಂಡು ಇದನ್ನು ಸಿದ್ಧಪಡಿಸಿದ್ದೇನೆ. ಆಕೆಯಲ್ಲಿ, ಆಕೆಯು ಬದುಕಿ ಬಾಳಿದ ಸಂದರ್ಭದಲ್ಲಿ, ಆ ಕಾಲದಲ್ಲಿ ಪ್ರಚುರವಾಗಿದ್ದ ಜಿನಧರ್ಮಶ್ರದ್ಧೆಯ ದೃಷ್ಟಿಯಿದು. ಶಾಸನಗಳು ಶಾಂತಳೆಯನ್ನು 'ಜಿನಸಮಯಸಮುದಿತಪ್ರಾಕಾರೆ, ಜಿನಧರ್ಮಕಥಾಕಥನಪ್ರಮೋದೆ, ಜಿನಧರ್ಮನಿರ್ಮಳೆ, ಜಿನಗಂಧೋದಕ ಪವಿತ್ರೀಕೃತೋತ್ತಮಾಂಗೆ' ಎಂದು ಮುಂತಾಗಿ ಬಣ್ಣಿಸಿವೆ; 'ಜಿನನಾಥಂ ತನಗೆಂದು ಆಪ್ತ'ನೆಂದು ನಿರ್ದೇಶಿಸಿವೆ. ಶ್ರೀ ಮೂಲಸಂಘ ದೇಸಿಯಗಣದ ಪುಸ್ತಕಗಚ್ಛ ಸಂಪ್ರದಾಯಕ್ಕೆ ಸೇರಿದ ಮೇಘಚಂದ್ರತ್ರೈವಿದ್ಯದೇವರ ಶಿಷ್ಯ ಪ್ರಭಾಚಂದ್ರ ಸಿದ್ಧಾಂತದೇವರು ಆಕೆಯ ಧರ್ಮಗುರು, ದೀಕ್ಷಾಗುರು. ಈ ಇಬ್ಬರು ಜೈನಾಚಾರ್ಯರ ಪ್ರಶಂಸೆಯೂ ಶಾಸನಗಳಲ್ಲಿ ಬಂದಿವೆ; ಆ ಕಾಲಕ್ಕೆ ಪ್ರಸಿದ್ಧ

ರಾಗಿದ್ದ ಸಂತರು ಅವರು. ಶಾಂತಳೆಯ ಧರ್ಮಶ್ರದ್ಧೆಗೆ ಪ್ರಭಾಚಂದ್ರರೇ ಆಧಾರಸ್ತಂಭ. ಶಾಂತಳೆಯ ತಾಯಿ ' ಗುಣನಿಧಿ ' ಮಾಚಿಕಬ್ಬೆಯೂ ಜಿನಧರ್ಮಶ್ರದ್ಧಾಳುವೇ.

ಶಾಂತಳೆಯ ತಂದೆ ' ಪಿರಿಯಪೆರ್ಗಡೆ ' ಮಾರಸಿಂಗಯ್ಯನು ಶೈವ ಸಂಪ್ರದಾಯಕ್ಕೆ ಸೇರಿದ್ದವನು ; ' ಹರಪಾದಾಬ್ಜ ಭಕ್ತಿಯೊಳು ' ನಿಂತವನು ; ಶಾಂತಿಗ್ರಾಮದಲ್ಲಿ ಧರ್ಮೇಶ್ವರನ ಗುಡಿಯ ಜೀರ್ಣೋದ್ಧಾರವಾದುದು ಅವನಿಂದ. ಆದರೇನು, ಮನೆಯಲ್ಲಿ ಧರ್ಮವಿರೋಧವಿರಲಿಲ್ಲ. ಶಾಂತಿಗ್ರಾಮದ ಶಾಂತಿನಾಥ ಬಸದಿಯನ್ನೂ ಮಾರಸಿಂಗಯ್ಯನೇ ಜೀರ್ಣೋದ್ಧಾರಮಾಡಿದ. ತಾಯಿತಂದೆಯರಿಬ್ಬರೂ ಪರಸ್ಪರ ಅನುರಕ್ತರು. ಸಜ್ಜನಿಕೆಯಲ್ಲಿ ಶ್ರದ್ಧಾವೈವಿಧ್ಯ ಮುಳುಗಿಹೋಗುತ್ತಿದ್ದ ಕಾಲ ಅದು. ಶೈವ-ಜೈನ ಸಂಪ್ರದಾಯಗಳಿಗೆ ಆಚಾರದಲ್ಲಿ ವೈಷಮ್ಯವೇನಿರಲಿಲ್ಲ. ಶಾಂತಲೆಯ ಕೈಹಿಡಿದ ವಿಷ್ಣುವರ್ಧನ-ಬಿಟ್ಟಿದೇವನ ಧಾರ್ಮಿಕ ನಿಲುವೇನಾಗಿದ್ದಿತೆಂದು ಯಾವ ಶಾಸನದಲ್ಲಿಯಾಗಲೀ, ಉಲ್ಲೇಖನದಲ್ಲಿಯಾಗಲೀ ಸ್ಪಷ್ಟವಾಗಿಲ್ಲ. ಹೊಯ್ಸಳ ರಾಜರು ಮೊದಲಿಗೆ ಜೈನರು ; ವಿಷ್ಣುವರ್ಧನನ ಕಾಲವಾದ ನಂತರ ವೈಷ್ಣವರು. ವಿಷ್ಣುವರ್ಧನನೇ ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವಧರ್ಮಕ್ಕೆ ಪರಿವರ್ತಿತನಾದನೆಂದು ಬಲವಾದ ಪ್ರತೀತಿಯೊಂದಿದೆ. ಆದರೆ ಇದಕ್ಕೆ ಶಾಸನಾಧಾರವಾಗಲೀ, ಗ್ರಂಥಾಧಾರವಾಗಲೀ ಏನೂ ಇಲ್ಲ. ರಾಮಾನುಜಾಚಾರ್ಯರು ಕನ್ನಡನಾಡಿಗೆ ಬಂದಿದ್ದರೆಂಬುದೇ ವಿವಾದಾಸ್ಪದವಾಗಿದೆಯಷ್ಟೆ.

ಇದು ಹೇಗಾದರೂ ಇರಲಿ. ರಾಜನಾಗಿದ್ದವನು ಧರ್ಮದ ವಿಚಾರದಲ್ಲಿ ಪಕ್ಷಪಾತವನ್ನು ತೋರಿಸದೆ ಜೈನಬಸದಿಗಳನ್ನೂ, ವಿಷ್ಣುಮಂದಿರಗಳನ್ನೂ, ಶಿವಾಲಯಗಳನ್ನೂ ಕಟ್ಟಿಸಿದನೆನ್ನುವುದು ನಿಜ. ಅವನು

ನಿರ್ಮಿಸಿದ 'ಪಂಚನಾರಾಯಣ' ಮಂದಿರಗಳಲ್ಲಿ ಬೇಲೂರಿನ ಕೇಶವ (ವಿಜಯನಾರಾಯಣ) ದೇವಾಲಯ ವೊಂದು; ೧೧೧೭ ರಲ್ಲಿ ಮುಗಿದ ಕಟ್ಟಡ ಇದು. ಅದೇ ವರ್ಷವೇ ಶಾಂತಳೆಯು ಆತನ ಪಟ್ಟಮಹಿಷಿ ಯಾದುದು. ಈ ದೇವಾಲಯದಲ್ಲಿಯೇ ಇರುವ ಕಪ್ಪೆಚನ್ನಿಗರಾಯನ ಪ್ರತಿಷ್ಠೆಯಲ್ಲಿ ಶಾಂತಳೆಯ ಪಾತ್ರ ವಿದ್ದಿತು. ಶ್ರವಣಬೆಳಗೊಳದಲ್ಲಿ ಶಾಂತಳೆಯು ಕಟ್ಟಿಸಿದ 'ಸವತಿಗಂಧನಾರಣ' ಬಸದಿಯು ಮುಗಿದುದು ೧೧೨೩ ರಲ್ಲಿ; ಅದಕ್ಕೆ ಗ್ರಾಮವನ್ನು ಉಂಬಳಿಕೊಟ್ಟವನು ವಿಷ್ಣುವರ್ಧನನೇ. ಇಲ್ಲಿರುವ ಶಾಂತಿನಾಥ ತೀರ್ಥಂಕರನ ಸಿಂಹಪೀಠದಲ್ಲಿ "ರಾಜತೇ ರಾಜಸಿಂಹೀವ ಪಾರ್ಶ್ವೇ ವಿಷ್ಣುಮಹೀಭೃತಃ। ವಿಖ್ಯಾತಾ ಶಾಂತಲಾಖ್ಯಾ ಸಾ ಜಿನಾಗಾರಮಕಾರಯತ್ ॥" ಎನ್ನುವ ಶಾಸನವಿದೆ. ಧರ್ಮಕಾರ್ಯದಲ್ಲಿ ವಿಷ್ಣುವರ್ಧನ-ಶಾಂತಳೆಯರು ಸಮಾಧಾನದಿಂದ ಪಾಲ್ಗೊಳ್ಳುತ್ತಿದ್ದರು ಎನ್ನುವುದಕ್ಕೆ ಬೇರೆ ನಿದರ್ಶನಗಳು ಅನಗತ್ಯ.

ಶಾಂತಳೆಯ ಬಾಳಿನಲ್ಲಿ ಮೇಲೆ ಹೇಳಿದ ಬಸದಿಯ ನಿರ್ಮಾಣ ಪ್ರಮುಖವಾದ ಘಟನೆ. ಹದಿನಾರನೆಯ ತೀರ್ಥಂಕರ ಶಾಂತಿನಾಥನಿಗಾಗಿ ಕಟ್ಟಿಸಿದ ಈ ಬಸದಿ ಸವತಿಗಂಧವಾರಣ ಜಿನಾಲಯ'ವೆಂದು ಹೇಗೆ ಹೆಸರು ಬಂದಿತೋ ಅದು ಸ್ಪಷ್ಟವಾಗಿಲ್ಲ. ಆ ಹೆಸರೇನೋ ಶಾಸನದಲ್ಲಿದೆ: 'ಶೋಭಕೃತು ಸಂವತ್ಸರದ ಚೈತ್ರಸುದ್ಧ ಪಾಡಿವ ಬೃಹಸ್ಪತಿವಾರದಂದು ಶ್ರೀ ಬೆಳ್ಗೊಳದ ತೀರ್ಥದೊಳು ಸವತಿಗಂಧವಾರಣ ಜಿನಾಲಯಮಂ ಮಾಡಿಸಿ....' ಈ ಬಸದಿಯ ನಿರ್ಮಾಣದಲ್ಲಿ ಗುರುಗಳಾದ ಪ್ರಭಾಚಂದ್ರರ ಪಾತ್ರ ಇದ್ದಿತೆನ್ನುವುದು ದ್ವೈನಸ್ಥ ಪಾದ ಪೀಠದಲ್ಲಿ ಕಂಡರಿಸಿರುವ ಈ ಶ್ಲೋಕದಿಂದ ಧ್ವನಿತವಾಗುತ್ತದೆ—

‘ ಪ್ರಭಾಚಂದ್ರ ಮುನೀಂದ್ರಸ್ಯ ಪದಪಂಕಜಷಟ್ಪದಾ ।
ಶಾನ್ತಳಾ.ಶಾನ್ತಿಜೈನೇಂದ್ರ ಪ್ರತಿಬಿಂಬಮಕಾರಯತ್ ॥’

ಇದು ಶಾಂತಳೆಯ ಜೀವನದಲ್ಲಿ ಕಡೆಯ ಕೆಲಸವಾಗಿದ್ದಂತೆ ತೋರುತ್ತದೆ. ಈ ಜಿನಾಲಯದ ನಿರ್ಮಾಣವಾದ ನಂತರ (೧೧೨೩ ರ ನಂತರ) ಮುಂದಿನ ಶಾಸನೋಲ್ಲೇಖವೆಂದರೆ ಶಾಂತಳೆಯು ಶಿವಗಂಗೆಯ ತೀರ್ಥದಲ್ಲಿ ‘ ವಿರೋಧಿಕೃತ್ ಚೈತ್ರಶುದ್ಧ ಪಂಚಮಿ ಸೋಮವಾರದಲಿ ಮುಡಿಪಿ ಸ್ವರ್ಗತೆ’ಯಾದುದೇ ; ಎಂದರೆ ಆಕೆ ತೀರಿಕೊಂಡುದು ೧೧೩೧ ರಲ್ಲಿ. ಅನಂತರ ಪಟ್ಟದರಸಿಯರಾದವರು ಲಕ್ಷ್ಮೀದೇವಿ (೧೧೩೫), ಮತ್ತು ಬಮ್ಮಲದೇವಿ (೧೧೪೦). ವಿಷ್ಣುವರ್ಧನ ತೀರಿಕೊಂಡುದು ೧೧೪೧ ರಲ್ಲಿ; ಇದೊಂದು ವಿವರವಾದರೆ ವಿಷ್ಣುವರ್ಧನನ ರಾಜ್ಯಭಾರವನ್ನು ೧೧೧೨ ರಿಂದ ೧೧೫೨ ರವರೆಗೆಂದು ಹೇಳುವ ಇನ್ನೊಂದು ವಿವರವೂ ಇದೆ; ಇದರ ಪ್ರಕಾರ ವಿಷ್ಣುವರ್ಧನನ ಆಳ್ವಿಕೆ ನಲವತ್ತು ವರ್ಷಗಳು. ಅರಸನು ಮುಂದೆ ಹತ್ತು ಅಥವಾ ಇಪ್ಪತ್ತು ವರ್ಷಗಳು ಬದುಕಿದ್ದರೂ ಮರೆಯಾದ ಶಾಂತಳೆಯನ್ನು ಆತನಾಗಲೀ ಜನರಾಗಲೀ ಮರೆಯುವುದು ಸಾಧ್ಯವಿರಲಿಲ್ಲ.

ಸಣ್ಣ ಪ್ರಾಯದಲ್ಲಿ, ಅಲ್ಪ ಜೀವನಾವಧಿಯಲ್ಲಿ ಅಷ್ಟು ಪ್ರಬಲವಾದ ಪ್ರಖ್ಯಾತಿಯನ್ನು ಗಳಿಸಿದ ಈ ಹೆಣ್ಣುಜೀವಕ್ಕೆ ಪ್ರೇರಕವಾಗಿದ್ದುದು, ಸ್ಫೂರ್ತಿಯಾಗಿದ್ದುದು, ಪುಷ್ಟಿಪ್ರದವಾಗಿದ್ದುದು ಜಿನಧರ್ಮಶ್ರದ್ಧೆ; ಅದರ ಪ್ರತೀಕವಾಗಿದ್ದ ಪ್ರಭಾಚಂದ್ರಗುರುಗಳ ಪ್ರಭಾವ. ಈ ದೃಷ್ಟಿಯನ್ನು ಈ ರೂಪಕದಲ್ಲಿ ಬಳಸಿಕೊಂಡಿದ್ದೇನೆ.

(೩)

ಈ ರೂಪಕದ ಹಂದರಕ್ಕೆ ಅನುವಾದ ವಿವರಗಳು ಕೊಂಚವೇ. ಶಾಂತಿಗ್ರಾಮದ ಚಮರೆ ಹುಡುಗಿಯೊಬ್ಬಳು ಹೊಯ್ಸಳರಾಜ ವಿಷ್ಣುವರ್ಧನನ ಕೈ ಹಿಡಿದುದು ; ಬೆಳ್ಗೊಳದ ಪ್ರಭಾಚಂದ್ರರು ಈ ಸಮಾಗಮವನ್ನು ನಿರ್ವಹಿಸಿದುದು ; ಅರಸ–ಅರಸಿಯರು ಬೇಲೂರಿನ ಕೇಶವ ದೇವಾಲಯವನ್ನು ಕಟ್ಟಿಸಿದುದು ; ಅಲ್ಲಿ ಶಿಲಾಬಾಲಿಕೆಯರನ್ನು (ಮದನಿಕೆಯರನ್ನು, ಶಾಲಭಂಜಿಕೆ ಪುತ್ಥಳಿಗಳನ್ನು) ಅರಸ ಕಡೆಯಿಸಿದ ಸಂದರ್ಭ ; ಅರಸನ ಭೋಗದೃಷ್ಟಿ ಮತ್ತು ಅರಸಿಯ ಯೋಗದೃಷ್ಟಿಗಳಲ್ಲಿ ತಲೆದೋರಿದ ವಿರೋಧ ; ಅರಸನಿಗೆ ಲಕ್ಷ್ಮೀದೇವಿಯ ಸಹವಾಸದ ಸಮಾಧಾನವನ್ನು ಒದಗಿಸಿ ಅರಸಿಯು ಬೆಳ್ಗೊಳದಲ್ಲಿ ಉಪಾಸಿಕೆಯಾಗಿ ನಿಲ್ಲುವುದು ; ಪ್ರಭಾಚಂದ್ರರ ನೇತೃತ್ವದಲ್ಲಿ ಸವತಿಗಂಧವಾರಣ ಬಸದಿಯ ನಿರ್ಮಾಣವಾದಾಗ ವಿಷ್ಣುವರ್ಧನ–ಶಾಂತಳೆಯರ ಪುನಸ್ಸಮಾಗಮ ; ಉತ್ಸವದ ಸಂಭ್ರಮ ಮುಗಿದ ಮೇಲೆ ನೋಂಪಿಯಲ್ಲಿ ನಿಂತ ಶಾಂತಳೆ ಸಲ್ಲೇಖನವ್ರತವನ್ನು ಹಿಡಿದು ತಾಯಿ ತಂದೆಯರನ್ನು ಕಡೆಯದಾಗಿ ಕಂಡುಬರಲು ಶಿವಗಂಗೆಗೆ ಹೋಗಿ ಅಲ್ಲಿ ನೋಂಪಿಯ ನಿತ್ರಾಣದಿಂದ 'ಮುಡಿಪು'ವುದು ; ಒಡನೆಯೇ ತಂದೆ ಮಾರಸಿಂಗಯ್ಯನೂ ಸಾಯಲು ತಾಯಿ ಮಾಚಿಕಬ್ಬೆ ಸಲ್ಲೇಖನವ್ರತವನ್ನು ಕೈಗೊಂಡು ಶಾಂತಳೆಯ ಗೆಳತಿ ಚಂದಲೆಯ ಮಾತಿನಂತೆ ಬೆಳ್ಗೊಳಕ್ಕೆ ಹೊರಡುವುದು—ಹೀಗೆ ಸಾಗುತ್ತದೆ ರೂಪಕ.

ಇದರಲ್ಲಿ ಪೂರ್ವಭಾಗವೆಲ್ಲ ಕಲ್ಪನೆಯೇ ; ಈ ವಿಚಾರವಾಗಿ ಇತಿಹಾಸ ಹೇಳುವುದು ಏನೂ ಇರದು. ಬೆಳ್ಗೊಳದ ಬಸದಿ ಮುಗಿದಾಗ ಶಾಂತಳೆಯೂ ವಿಷ್ಣುವರ್ಧನನೂ ಒಟ್ಟಿಗಿದ್ದರೆನ್ನುವುದು ಶಾಸನದಿಂದ ಧ್ವನಿತವಾಗುತ್ತದೆ. ಶಾಂತಳೆಯಲ್ಲದೆ ವಿಷ್ಣುವರ್ಧನನಿಗೆ ಇತರ ಮಡದಿಯರಿದ್ದು, ಶಾಂತಳೆಯು ಅರಸನಿಂದ ದೂರವಾದಳೆಂಬುದು ಊಹೆ ; ಸಮರ್ಥನೆಗೆ ಸಿಗುವ ಊಹೆ. ಕಾರಣವನ್ನು ಮಾತ್ರ ಕಲ್ಪಿಸಿಕೊಳ್ಳಬೇಕಷ್ಟೆ. ಬೇಲೂರಿನ ದೇವಾಲಯದ ನಿರ್ಮಾಣದ ವಿವರಗಳೂ ಅಷ್ಟಿಷ್ಟು ಶಾಸನಸಿದ್ಧವಾಗಿವೆ ; ಆದರೆ ಮದನಿಕೆಯರ ಪ್ರತಿಷ್ಠೆ ಮತ್ತೆ ಕಲ್ಪನೆಗೆ ಮಾತ್ರ ನಿಲುಕುವಂಥದು. ಶಾಂತಳೆಯು ನಾಟ್ಯಚದುರೆಯಾಗಿದ್ದಳೆಂದೂ, ಆಕೆಯ ಸಖಿಯರೇ ಈ ಮದನಿಕೆಯರೆಂದೂ, ಅಥವಾ ಆಕೆಯ ನಾಟ್ಯಭಂಗಿಗಳನ್ನೇ ಪುತ್ಥಳಿಗಳಲ್ಲಿ ಪ್ರತಿಬಿಂಬಿಸಿ ನಿಲ್ಲಿಸಿದರೆಂದೂ ಬೇರೆಬೇರೆ ನಂಬಿಕೆಗಳು ಒದಗಿಬಂದಿವೆ. ದೇವಾಲಯದ ವಾಸ್ತುಶಿಲ್ಪಶಾಸ್ತ್ರದಲ್ಲಿ ಇಂಥ ಸಾಲಭಂಜಿಕೆಯರ ಪಾತ್ರ ಬೇರೆಯೇ ; ಅದರ ಪ್ರಸ್ತಾಪ ಇಲ್ಲಿ ಬೇಡ. ಮೇಲೆ ಹೇಳಿದ ನಂಬಿಕೆ ಸ್ವಾರಸ್ಯವಾಗಿದೆ, ಅಷ್ಟು ಸಾಕು.

ಕಡೆಯಲ್ಲಿ ಬರುವ ಶಾಂತಳೆಯ ಸಾವು ಮತ್ತು ಮುಂದೆ ಬೇಗ ಸಾಗುವ ವಿವರಗಳು ಶಾಸನದಲ್ಲಿ ಬಂದಂಥ ಪ್ರಸಂಗಗಳೇ. ಶಾಂತಳೆಯು ಶಿವಗಂಗೆಯಲ್ಲಿ ಸತ್ತಳೆಂಬುದು ದಿಟ ; ಆದರೆ ಹೇಗೆ ಸಾವು ಒದಗಿತೆಂದು ಸ್ಪಷ್ಟವಾಗುವುದಿಲ್ಲ. ಕಲ್ಪನೆಯಲ್ಲಿ ಆಕಸ್ಮಿಕ (ಕಾಲುಜಾರಿಕೆ) ಮತ್ತು ಆತ್ಮಹತ್ಯೆಗಳೆರಡೂ ಕಾಣಿಸಿಕೊಳ್ಳುತ್ತವೆ. ನಾನಿಲ್ಲಿ ನೋಂಪಿಯ ಕಾರಣವನ್ನು ಕಾಣಿಸಿದ್ದೇನೆ. ಶಾಂತಳೆಯ ಜಿನಧರ್ಮಶ್ರದ್ಧೆಗೆ ಇದು ಸಮಂಜಸವಾದುದೆಂಬ ಕಾರಣದಿಂದ ಸಲ್ಲೇಖನ ವ್ರತವನ್ನು ಸೂಚಿಸಿ ಶಾಂತಳೆಯ ವ್ಯಕ್ತಿತ್ವದ ಹೆಗ್ಗಳಿಕೆಗೆ ಪೂರಕವಾಗಿ ಮನಃಪೂರ್ವಕವಾದ ಧಾರ್ಮಿಕ ವಿಧಿಯೊಂದನ್ನು ಒದಗಿಸಿದ್ದೇನೆ.

ಶಾಂತಳೆಗೆ ಕಷಾಯಗಳ ಅಭ್ಯಂತರಸಲ್ಲೇಖನವನ್ನು ಮೊದಲೇ ಒದಗಿಸಿ ಕಾಯದ ಬಾಹ್ಯಸಲ್ಲೇಖನವನ್ನು ಕಡೆಯಲ್ಲಿ ಹೇಳಿ, ರಾಗದ್ವೇಷಪರಿಣಾಮ ವಿನಿರ್ಮುಕ್ತೆಯಾಗಿ ಲೋಕವ್ಯವಹಾರ ನಿರತೆಯಾಗಿದ್ದರೂ ನಿರ್ಗ್ರಂಥೆಯಾಗಿ ಉಪಶಾಂತೆಯಾಗಿದ್ದ ಶಾಂತಳೆಯ ಬಾಳಿಗೆ ಇದೇ ಸಮುಚಿತವಾದ ಅವಸಾನ ಎಂದು ನನ್ನ ಎಣಿಕೆ. ನಿಜವಾಗಿ ನಡೆದದ್ದೂ ಹೀಗೆಯೇ ಇದ್ದೀತು. ಶಾಸನದಲ್ಲಿ ಬರುವ 'ಮುಡಿಪಿ ಸ್ವರ್ಗತೆಯಾದಳ್'ನ್ನುವುದಕ್ಕೆ ಹೀಗೆಯೇ ಅರ್ಥಮಾಡಬೇಕು. ಬೆಳ್ಗೊಳದ ಚಂದ್ರಗಿರಿಯ ಮೇಲೆ ಭದ್ರಬಾಹು ಗುಹೆಯ ಮುಂದೆ ಹೀಗೆ ಸಲ್ಲೇಖನವ್ರತದಿಂದ ದೇಹವಿಡುವ ಪದ್ಧತಿಯಿದ್ದಿತು. ಅಲ್ಲಿ ಕಾಣಸಿಗುವ ನೂರಾರು ಬರಹಗಳಲ್ಲಿ 'ನೋನ್ತು ಮುಡಿಪ್ಪಿದರ್', 'ಸಮುಚಿತ್ತದೊಳು ಮುಡಿಪಿ ಸ್ವರ್ಗಸ್ಥನಾದಂ' ಎಂದು ಮುಂತಾದ ಒಕ್ಕಣೆಯೇ ಇರುತ್ತದೆ. ಶಾಂತಳೆಯೂ ಈ ಸ್ಥಳದಲ್ಲಿಯೇ ಸಾಯಲು ಸಿದ್ಧಳಾಗಿ ಸಲ್ಲೇಖನವ್ರತವನ್ನು ಕೈಗೊಂಡಿದ್ದಳೆನ್ನುವುದು ಅಸಂಭವವಲ್ಲ.

ಕ್ರಮವಾಗಿ ಆಹಾರವನ್ನು ಕಡಿಮೆಮಾಡಿ, ಶಕ್ತ್ಯನುಸಾರ ಉಪವಾಸವಿದ್ದು ಪಂಚನಮಸ್ಕಾರ ಮಾಡುತ್ತ ದೇಹವಿಡುವುದು ಸಲ್ಲೇಖನವ್ರತದ ವಿವರ. ಇದು ನಡೆಯುತ್ತಿದ್ದಾಗ ಇನ್ನೇನು ಅವಸಾನ ಸಮಯ ಬಂದಿತೆನ್ನುವ ಮೊದಲು ತಂದೆತಾಯಿಯರನ್ನು ಕಂಡುಬರುವೆನೆಂದು ಶಾಂತಳೆ ಶಿವಗಂಗೆಗೆ ಹೋಗಿರಬಹುದು ; ಅಲ್ಲಿ 'ಕೃಶೀಕರಣ'ದ ಒತ್ತಡ ಹೆಚ್ಚಿ ಬೆಳ್ಗೊಳಕ್ಕೆ ಹಿಂದಿರುಗಿ ಬರಲಾರದೆ ಅಲ್ಲಿಯೇ ತೀರಿಕೊಂಡಿರಬಹುದು. ಆಕೆ ಕೈಗೊಂಡ ಸಲ್ಲೇಖನವ್ರತವನ್ನು ಭದ್ರಬಾಹು ಗುಹೆಯ ಎದುರೇ ತಾನು ನಡೆಸುವುದೆಂದು ಮಾಚಿಕಬ್ಬೆ ಬೆಳ್ಗೊಳಕ್ಕೆ ಹೋಗಿರಬಹುದು. ಇಲ್ಲವಾದರೆ ಶಾಂತಳೆ ಶಿವಗಂಗೆಗೆ ಬಂದುದಾಗಲೀ, ಅವಳು ಸ್ವರ್ಗತೆಯಾಗಲು

ಮಾಚಿಕಬ್ಬೆ ಬೆಳ್ಗೊಳಕ್ಕೆ ಬಂದುದಾಗಲೀ, ನಿಷ್ಪನ್ನವಾಗಲಾರದು. ಶಾಸನವು 'ಆರಸಿ ಸುರಗತಿಯನಯ್ದಿದಳಿಗ ಲಾಗೆನಗೆಂದು ಬೆಂದು ಬೆಳುಗೊಳದಲು ದುರ್ದ್ಧರ ಸನ್ಯಾಸದಿಂ ಪರಿಣತೆ ತಾಯಿ ಮಾಚಿಕಬ್ಬೆ ತಾನುಂ ತೊ[illegible]ದಳ್' ಎಂದು ವಿವರಿಸುತ್ತದೆ. ಆಕೆ-ಒಂದು ತಿಂಗಳು ಉಪವಾಸವಿದ್ದಳಂತೆ ; 'ತಿಂಗಳುಪವಾಸದೊಳೆಂಬಿನೆ ಮಾಚಿಕಬ್ಬೆ ತಾಂ ಸುರಗತಿಗಯ್ದಿದಳು ಸಕಳಭವ್ಯರ ಸನ್ನಿಧಿಯೊಳ್ ಸಮಾಧಿಯಿಂ'

(೪)

ಈ ರೂಪಕದಲ್ಲಿ ನೃತ್ಯಪ್ರಧಾನವಾದ, ಅಭಿನಯಕ್ಕೆ ಒಗ್ಗುವ ಅಭಿಪ್ರಾಯಗಳನ್ನು ಸೂಚಿಸಬೇಕೆಂದು ನನ್ನ ಪ್ರಯತ್ನ. ಎಂಟು ದೃಶ್ಯಗಳಲ್ಲಿ ಮೇಲೆ ಕಾಣಿಸಿದ ವೃತ್ತಾಂತ ಪರಂಪರೆಯನ್ನು ಅಳವಡಿಸಲಾಗಿದೆ. ಅಗತ್ಯವೆಂದು, ಉಪಯುಕ್ತವೆಂದು ತೋರಿದೆಡೆ (ಐದಾರು ಕಡೆ) ಶಾಸನದ ಪದ್ಯಗಳನ್ನು ಹಾಗೆಯೇ ಇಟ್ಟಿದೆ. ಶಾಂತಳೆಯು ಉಪಾಸಿಕೆಯಾದಾಗ ಅವಳ ಒಡನಾಡಿಯೆಂದು ಚಂದಲೆಯ ಪಾತ್ರ ಹೊಸದು. ಕವಿತೆಯ ಸಾಲುಗಳು ಗೀತಪ್ರಧಾನವಾದುವು ; ಛಂದಸ್ಸಿನ ಗೋಜಿಗೆ ಹೋಗಿಲ್ಲ. ನನ್ನ ಮಟ್ಟಿಗೆ ರಾಗಗಳನ್ನು ಹಾಕಿಕೊಂಡಿದ್ದೆನಾದರೂ ಅಚ್ಚಿನಲ್ಲಿ ಅವನ್ನು ಕಾಣಿಸಿಲ್ಲ. ಈ ವಿಚಾರದಲ್ಲಿ ಉಳಿದವರಿಗೆ ಸ್ವಾತಂತ್ರ್ಯವಿರಲೆನ್ನುವುದು ಕಾರಣ.

ಜಯನಗರ, ಬೆಂಗಳೂರು
ಡಿಸೆಂಬರ್ ೨೫, ೧೯೭೦

ಎಸ್. ಕೆ. ರಾಮಚಂದ್ರರಾವ್

ದೃಶ್ಯ ೧

‘ ಶ್ರೀಮತ್ತ್ರೈಲೋಕ್ಯಪೂಜ್ಯಾಯ
ಸರ್ವಕರ್ಮಸು ಸಾಕ್ಷಿಣೇ ।
ಫಲದಾಯ ನಮೋ ನಿತ್ಯಂ
ಕೇಶವಾಯ ಶಿವಾಯ ಚ ॥ ’

[ಶಾಂತಿಗ್ರಾಮ. ಧರ್ಮೇಶ್ವರನ ಗುಡಿಯಲ್ಲಿ ಮಾದಸಿಂಗಯ್ಯನೂ ಆತನ ಮಗಳು ನಾಚಿಕಬ್ಬೆಯೂ ದೇವರೆದುರು ಕೈಮುಗಿದು ನಿಂತಿದ್ದಾರೆ.]

ಇಬ್ಬರೂ

‘ ಸುತ್ತಿರೆ ಗಂಗೆಯು ಪನಿಗಳ್
ಮುತ್ತಿನ ಬಾಸಿಗಮದೆನಿಸಿ ವಾಸುಗಿ ಸುಖದಿಂ ।
ಸುತ್ತಿರ್ದ ಜೂಟದಾ ದೇ-
ವೋತ್ತಮನೆಮಗೊಸೆದು ಕುಡುಗೆ ಸುಖಸಂಪದಮಂ ॥ ’

ಮಾರಸಿಂಗಯ್ಯ

ಬಾಳಬಳ್ಳಿಯು ಮಕ್ಕಳಿಲ್ಲದೆಯೆ
ಮುಳ್ಳುಮೊನೆಯಾಗಿಹುದು ಶಿವನೆ !
ಬೆಳ್ಳಿಯೊಡಲಲ್ಲಿ ಬಂಗಾರದಾ ಬಯಕೆ
ಸುಳ್ಳುಮಾಡಲಿಬೇಡ ಪೊಡವಿಗೊಡೆಯ ||

ಮಾಚಿಕಬ್ಬೆ

ಸಂಜುಂಡು ಸುರತತಿಗೆ ಶುಭವಿತ್ತ
ಕೆಂಜೆಡೆಯ ಕಲ್ಯಾಣಮೂರ್ತಿ !
ನಂಜೊಂದು ಕಾಡುತಿಹುದೆಮ್ಮ ಬಾಳ-
ಸಂಜೆಯಲಿ ಧರ್ಮೇಶ್ವರನೆ ಸಲಹು ||

(ಮಹಾದೇವನ ಮುಡಿಯಿಂದ ಹೂವೊಂದು ಕೆಳಗುರುಳುವುದು)

ದೃಶ್ಯ ೨

[ಅದೇ ಗ್ರಾಮದ ಬಸದಿಯಲ್ಲಿ ಶಾಂತಿನಾಥ ತೀರ್ಥಂಕರನು ಮಾಚಿಕಬ್ಬೆಯ ಇಷ್ಟದೈವ. ಅಲ್ಲಿಗೆ ಆಕೆ ಹೊತ್ತ ಹರಕೆಯ ಫಲವಾಗಿ, ಧರ್ಮೇಶ್ವರನ ದಯೆಯಿಂದಾಗಿ, ಶಾಂತಳೆ ಹುಟ್ಟಿದಳು.

ಆನಂದದೋಲಾಟದಲಿ
ತಾಯ್ತಂದೆ ಬೆಳೆಸಿದರು
ಶಾಂತಳೆಯ ಪ್ರೇಮಪುತ್ಥಳಿಯ ।

ಬೆಳಗೊಳದ ಪ್ರಭಾಚಂದ್ರ ಮುನಿಗಳು ಹುಡುಗಿಗೆ ಅಕ್ಷರಾಭ್ಯಾಸ ಮಾಡಿಸಿದರು, ಧರ್ಮಶ್ರದ್ಧೆ ಮೂಡಿಸಿದರು. ಮುನಿಗಳ ಪ್ರಭಾವ ಶಾಂತಳೆಯ ಮೇಲೆ ಬಲವಾಗಿ ಮೂಡಿತು.]

ನಾಲ್ಮೊಗದ ಬೊಮ್ಮನೇ ಮಾತಿನೊಳ್
    ಒಡೆತನದೊಳ್ ಪ್ರೌಢನು ತಾನಾಗಿ
ಗುಣಗಳ ಹರವಿನಲಿ ಹರಿ
ಜ್ಞಾನಸಾಗರನುದಾತ್ತಗುಣವಾರಿಧಿಯು
ಸಿದ್ಧಾಂತಭೂಷಣನೋರ್ವನೇ ಗುರು
    ಪ್ರಭಾಚಂದ್ರಮುನೀಂದ್ರನೂರ್ವಿಯೊಳು.

ಶಾಂತಳೆ ಭವದ ಬೇಗೆಯನು ಬಾಯ್ತುಂಬಿ ಬಾಳಬಹುದೆ ?
ಕದಲಿಸಾಳದೊಳು ಒಡಲನ್ನು ಗುಡುಗುಡಿಸಿ
ಅಳುತಳುತ ಕುದಿಕುದಿದು ತೊಳಲುತಿಹರೀ ಜನರು !
ಸಾಗರವನೀಜುವೊಡೆ ಶೀಲವೊಂದೆ ಬಲ
ಕಷಾಯಗಳ ಕೈಕಟ್ಟಿ ನೋಂಪಿಗಳ ನಡೆಸುತ್ತ
ಸಾಗಿದೊಡೆ ಸಂತಸವು ನಿಮಗೆಂದು
ಜಿನಧರ್ಮದಾದೇಶ
ಪ್ರಭಾಚಂದ್ರರುಪದೇಶ

[ಶಾಂತಳೆಯು ದೂರಸರಿದಾಗ ಮಾಚಿಕಬ್ಬೆಯೂ ಮಾರಸಿಂಗಯ್ಯನೂ ಗುರುಗಳ ಬಳಿ ಬಂದು, ಪಾದಮುಟ್ಟಿ ನಮಸ್ಕರಿಸಿ]

ಮಾಚಿಕಬ್ಬೆ ಶಾಂತಳೆಗೆ ಕಲಿಯಲಿಹ ಗೀಳು ಬಹಳ
ವೀಣೆಯನೆ ಹಿಡಿದು ತಂತಿಗಳ ಮೀಂಟಿ
ನಾದವುದ್ಭವಿಸಿ ಲಾಸ್ಯವನಾಡೆ
ಮೈಮರೆತು ಮನದುಂಬಿ
ಸಂಭ್ರಮದಲೋಲಾಡುವಳು !

ಅಂಗಭಂಗಿಗಳ ತರಂಗಮಾಲೆಯದು
ಭಾವಭೃಂಗದ ಮೃದಂಗಲೀಲೆಯಲಿ
ಸೇರಲಂಗನೆಯು ಶೃಂಗಾರನಟ-
ನರ್ಧಾಂಗಿಯೊಲು ಕಂಗೊಳಿಪಳಚ್ಚರಿಯು !

ಮಾರಸಿಂಗಯ್ಯ ನಮ್ಮ ಕುಲದಲ್ಲಿ ಕಲೆಯ ಸೊಲ್ಲಿಲ್ಲ
ನೇಮವಂತರು ನಾವು ಕರ್ಮಠರು
ಕಲೆಯು ಶೀಲವನೆ ಕೊಲಬಹುದೆಂದು
ಕೇಳಿಹೆವು ಗುರುವೇ, ದಿಟವೆ ಈ ಮಾತು ?

ಪ್ರಭಾಚಂದ್ರ ನಂಬದಿರಿ, ದಿಟವಲ್ಲ ಆ ಮಾತು !
ಶಾಂತಳೆಯ ಸಂಸ್ಕಾರ ಬಲದಲ್ಲೆ ನಗೆ
ಸಂದೇಹವೇನಿಲ್ಲ, ನಂಬಿಕೆಯು ಮುಂದು !
ಕಾಂತತನುಕಾಂತಿಯಲಿ ಕಲೆ ಶೋಭಿಪುದು
ಆದರಿಂದ,
ಅಂತರಂಗದ ಕೊಳೆಯನೆ ಕಳೆದು
ಶಾಂತಿಯನೆ ಸಾಧಿಪಳು ಶಾಂತಳೆ !

ಶೀಲದೊಳ್ ಕಲೆಯಂ ಕರ್ಚಿ
ನಿತ್ಯಂ ಸ್ವಾತ್ಮಾನತಕ್ಲೇಶವಂ
ಜಗದೊಳ್ ಶಾಂತಳೆ ಕಳೆವಳ್

ದೃಶ್ಯ ೩

[ಚೋಳರನ್ನು ಹೊಡೆದೋಡಿಸಿ, ತನ್ನ ಸಾಮ್ರಾಜ್ಯವನ್ನು ನಿರಾಪದವನ್ನಾಗಿ ಮಾಡಿ ಹಿಂದಿರುಗಿದ ಹೊಯ್ಸಳ ರಾಜ ವಿಷ್ಣುವರ್ಧನ-ಬಿಟ್ಟಿದೇವನು ರಾಜಗುರುಗಳಾದ ಪ್ರಭಾಚಂದ್ರ ಮುನೀಂದ್ರರನ್ನು ನೋಡಲೆಂದು ಬೆಳಗೊಳಕ್ಕೆ ಬಂದನು. ಅಕ್ಕಪಕ್ಕದ ಹಳ್ಳಿಗಳಿಂದೆಲ್ಲ ಜನ ನೆರೆದಿದ್ದರು ; ಗ್ರಾಮದಿಂದ ಮಾರಸಿಂಗಯ್ಯನ ಮನೆಯವರೂ ಬಂದಿದ್ದರು. ಮಠದಲ್ಲಿ ಕುಶಲಪ್ರಶ್ನೆಯಾದನಂತರ ಗುರುಗಳು ರಾಜನ ಮುಂದೆ ಶಾಂತಳೆಯ ಮಾತನ್ನೆತ್ತಿದರು. ಸಮರಶೂರನಾದ, ಅಪ್ರತಿಮ ಸಾಹಸಿಯಾದ ರಾಜಕಾರ್ಯ ಸಮರ್ಥನಾದ ರಾಜನಿಗೆ ಧರ್ಮಶ್ರದ್ಧೆ ಸಾಲದೆಂದು ಗುರುಗಳಿಗನಿಸಿ, ಶಾಂತಳೆಯ ಕೈ ಹಿಡಿದರೆ ಈ ಕೊರತೆ ನೀಗಬಹುದೆಂದೆಣಿಸಿದರು.

ನಿರ್ಮಲಾಂತಃಕರಣರೂ ಮಿತಭಾಷಿಗಳೂ ಆದ ಪ್ರಭಾಚಂದ್ರರು ಶಾಂತಳೆಯನ್ನು ಬಾಯಿತುಂಬ ಹೊಗಳಿದುದು ರಾಜನ ಕುತೂಹಲವನ್ನು ಕೆರಳಿಸಿತು. ಆಕೆಯನ್ನು ನೋಡಬೇಕೆಂದು ರಾಜ ಬಯಸಿದಾಗ ಗುರುಗಳು ಮಾರಸಿಂಗಯ್ಯನನ್ನೂ

ಮಾಚಿಕಬ್ಬೆಯನ್ನೂ ಶಾಂತಳೆಯನ್ನೂ ಬರಮಾಡಿಕೊಂಡು ಭೇಟಿ ಮಾಡಿಸಿದರು. ಶಾಂತಳೆಯ ಲಾವಣ್ಯಕ್ಕೂ ಗಾಂಭೀರ್ಯಕ್ಕೂ ವಿನಯಕ್ಕೂ ವಾಕ್ಪ್ರೌಢಿಮೆಗೂ ರಾಜ ಮನಸೋತ.

ಆವಳ ಕಲೆಯ ನೈಪುಣ್ಯವನ್ನು ಕಾಣಲೆಂದು ಮಾರಸಿಂಗಯ್ಯನ ಮನೆಯವರೊಂದಿಗೆ ವಿಷ್ಣುವರ್ಧನರಾಜನು ಶಾಂತಿಗ್ರಾಮಕ್ಕೆ ಬಂದನು. ಅಲ್ಲಿನ ಧರ್ಮೇಶ್ವರನ ಗುಡಿಯಲ್ಲೇ ರಾಜನೆದುರು ಶಾಂತಳೆ ವೀಣೆ ನುಡಿಸಿದಳು, ನೃತ್ಯ ಮಾಡಿದಳು. ರಾಜ ಆಕೆಯನ್ನು ಮದುವೆಯಾಗಲು ನಿಶ್ಚಯಿಸಿದನು. ಪ್ರಭಾಚಂದ್ರ ಮುನಿಗಳ ಸೂಚನೆಯ ಮೇರೆಗೆ ಮಾರಸಿಂಗಯ್ಯನೂ ಮಾಚಿಕಬ್ಬೆಯೂ ಒಪ್ಪಿದರು. ಶಾಂತಳೆಯೂ ರಾಜನನ್ನು ಮೆಚ್ಚಿಕೊಂಡಿದ್ದಳು.

ಆವರೆಗೆ ರಾಜನಿಗೆ ಕಲೆಯಲ್ಲಿ ಅಷ್ಟಾಗಿ ಅಭಿರುಚಿಯಿರಲಿಲ್ಲ. ಶಾಂತಳೆಯ ಮೇಲಣ ಅಭಿಮಾನ ಕಲಾಸಕ್ತಿಯನ್ನು ಮೂಡಿಸಿತು. ಶಾಂತಳೆಯು ಅರಸನನ್ನು ವರಿಸಿ ಪಟ್ಟಮಹಿಷಿಯಾದಳು, ಹಿರಿಯರಸಿಯಾದಳು.]

(ಬೆಳಗುಳದ ಬಸದಿ, ಪ್ರಭಾಚಂದ್ರರು ಕೂತಿದ್ದಾರೆ. ಪ್ರವೇಶ, ವಿಷ್ಣುವರ್ಧನ)

ನೇಪಥ್ಯದಲ್ಲಿ

‘ ಕೆಲರಂ ಕಿಳ್ತಿಕ್ಕಿ ಬೇರಂ ಬಿದಿರ್ದು ಕೆಲರನತ್ಯುಗ್ರಸಂಗ್ರಾಮದೊಳ್ ಬಾ-
ಳ್ದಲೆಗೊಂಡಾಕ್ಷೇಪದಿಂದಂ ಕೆಲರ ತಲೆಗಳಂ ಮೆಟ್ಟಿ ನಿಂದುಗ್ರಕೋಪಂ ।
ಮಲೆವತ್ಯುದ್ವೃತ್ತರಂ ತೊತ್ತಳದುಳಿದು ನಿಜಸ್ವಾರಾಜ್ಯಸಾಮ್ರಾಜ್ಯಮಂ ತೋ-
ಳ್ವಲದಿಂ ನಿಷ್ಕಂಟಕಂ ಮಾಡಿದನಧಿಕಬಳಂ ವಿಷ್ಣು ಜಿಷ್ಣು ಪ್ರತಾಪಂ ॥ ’

[ಪ್ರಭಾಚಂದ್ರರನ್ನು ಕಂಡು ನಮಸ್ಕರಿಸಿ]

ವಿಷ್ಣುವರ್ಧನ

ಶರಣೆಂದುಂಮುಕ್ತಿವಧೂಲೀಲಾಂತರಂಗಂಗೆ
ಸಮ್ಯಕ್ತ್ವವಿಭೂಷಣಂಗೆ ನಿರುಪಮಾನಂದಂಗೆ ।
ಜಿನಧರ್ಮದಿವಾಕರಂಗೆ ಜಿತಾತ್ಮಂಗೆ ಪರಿ–
ಶುದ್ಧಂಗೆ ಪ್ರಭಾಚಂದ್ರಮುನೀಂದ್ರಂಗೆ ರತ್ನಾಕರಂಗೆ ॥

ಪ್ರಭಾಚಂದ್ರ

ಕುಶಲವೇ ರಾಯಂಗೆ ಗಂಡರಾಭರಣಂಗೆ
ಸಂಗ್ರಾಮರಾಮಂಗೆ ಸಮರಧುರಂಧರಂಗೆ ।
ದುಷ್ಟರ್ಗೆ ಧೂರ್ತಂಗೆ ಭುಜಬಳವೀರಗಂಗಂಗೆ
ತ್ರಿಭುವನಮಲ್ಲ ತಳಕಾಡುಗೊಂಡಂಗೆ ॥

ವಿಷ್ಣುವರ್ಧನ

ಆಚಾರ್ಯರಾಶಿಷದ ಶ್ರೀರಕ್ಷೆಯರಲಾಗಿ
ವಿಜಯೋತ್ಸವದ ಕುಶಲವಲ್ಲದಿನ್ನೇನು ।
ಸಮರಕೋಲಾಹಲದ ಕಾಳರಾತ್ರಿಯ ಕಳೆದು
ಭಟ್ಟಾರಕರ-ಶಾಂತಮುಖಮಂಡಲವ ಕಾಣ್ಬುದೇ
ಸಾಂತ್ವನವು ಸಂತಸವು ಐಸಿರಿಯು ನಮಗೆ ॥

ಕಳೆದೆಂಟುತಿಂಗಳೆಮಗಾಗಿತ್ತು
ತೊಣ್ಣೂರು ಗಿರಿದುರ್ಗ ರಾಜಧಾನಿ ।
ಅಲ್ಲಿ ನಾವಿರಲಾಗಿ ಬಂದರೊಂದು ದಿನ
ಕೆಳನಾಡಿಂದೋರ್ವ ವಿಷ್ಣುಮುನಿ
ವಿಮಲಾಚಾರವಿಚಾರ ಪರಾಯಣರು
ಚೋಳರಾಜನುಪಟಳವ ತಡೆಯಲಾರದೆ
ಬಂದರಿಲ್ಲಿಗೆ ನೆಮ್ಮದಿಯ ಬಯಸಿ ।
ಯಾದವಾದ್ರಿಯಲಿ ಹರಿಮಂದಿರವ
ಕಟ್ಟದೆವು ಅವರಿಗೆಂದು
ಬೆಲುಹೂರಲೊಂದು ದೇಗುಲವ ಕಟ್ಟ
ನಿಮ್ಮಾ ವಿಜಯದ ನೆನಪನುಳಿಸಿರಿ
ಎಂದವರ ಆದೇಶವಾಗಿಹುದು

ಪ್ರಭಾಚಂದ್ರ

ಒಳಿತೊಳಿತು, ಮಾಡಿರಂತೆಯೆ ನೀವು
ಧರ್ಮಸಾಧನವಾಗಲೀ ಭುಜಬಲದ ಗೆಲುವು !

ಕಲೆಯ ಬೀಡಾಗಿರಲಿ ದೇಗುಲವು
ಸೊಬಗಿನ್ನೈಸಿರಯೆ ಬರಲಿ ಮೈವೆತ್ತು !
ಕಲೆಗಾಗಿ ಧರ್ಮ, ಧರ್ಮಕಾಗಿ ಕಲೆ
ಅನ್ಯೋನ್ಯ ಆಶ್ರಯದ ಮರ್ಮವೇ ನೆಲೆ
ಮಾರಸಿಂಗನ ಮಗಳು ಶಾಂತಳೆಯೆ ತಾರ್ಕಾಣೆ
ಸಕಲಕಲಾಸರಸ್ವತಿಯು, ವಾಗ್ವಿಶಾರದೆಯು
ಜಿನಸಮಯಗಂಭೀರೆ ನಿಜಧರ್ಮನಿರ್ಮಳೆ !

ವಿಷ್ಣುವರ್ಧನ ಯಾರವಳು ಶಾಂತಳೆ ?

[ಪ್ರಭಾಚಂದ್ರರು ಬಸದಿಯ ಪಕ್ಕದಲ್ಲೇ ಬೀಡಿನಲ್ಲಿದ್ದ ಮಾರಸಿಂಗಯ್ಯ, ಮಾಚಿಕಬ್ಬೆ, ಶಾಂತಳೆಯರನ್ನು ಕರೆಯಲು ಕಳಿಸಿದರು. ಅವರು ಮೂವರೂ ಬಂದೊಡನೆ ಗುರುಗಳಿಗೆ ನಮಸ್ಕರಿಸಿ ರಾಜನಿಗೆ ತಲೆಬಾಗಿ ನಿಂತರು. ಗುರುಗಳಿಂದ ಅಪ್ಪಣೆ ಪಡೆದು ಕೂತರು.]

ವಿಷ್ಣುವರ್ಧನ
(ಸ್ವಗತ)

ತುಂಬಿತು ಕಣ್ಗಳ ಸಗ್ಗದ ಸುರಸೊಬಗು
ಕುಂದದ-ಈ-ಸಿರಿಯುಂಪಕೆ ಹೊಂದಿಕೆಯೇನು ?

ಸಂಪದ ಗುಣಗಂಭೀರಳು ತರಳೆ
ಭೃಂಗವಿನೀಳದ ಕೋಮಳ ಕುಂತಳೆ
ಪಂಕಜಲೋಚನೆ ಶಶಿಕುಲಭೂಷಣೆ
ಸಂಚಿತ ಪುಣ್ಯಪುರಸ್ಕೃತ-ಶುಚಿಸ್ಮಿತ-ಶಾಂತಳೆ

(ಪ್ರಕಾಶ) ಗುರುಗಳಿಂದಾಯ್ತು ಗುಣಗಾನ
ಎಣೆಯುಂಟು ಇದಕಾವ ಸಮ್ಮಾನ ?
ಕೇಳಬಹುದೇ ಗಾನ ? ನೋಡಬಹುದೇ ನಟನ ?

ಮಾರಸಿಂಗಯ್ಯ ಅರಸರ್ಗೆ ತಡೆಯುಂಟೆ ?
ಬಿಡುವುಂಟೆ ಜೀಯಾ
ದಯಮಾಡಿ ಗ್ರಾಮಕ್ಕೆ
ನೋಡುವಿರಿ ಬೀಡಲ್ಲಿ
ಒಡೆಯರಾದರದ ಫಲವನ್ನು

ಪ್ರಭಾಚಂದ್ರ ಸರಿಯೆ ಮಾರಸಿಂಗನ ಮಾತು,
ಬಸದಿಯಲಿ ಸಲ್ಲದೀ ಗಾನನಟನ !

ಹೋಗಿಬನ್ನಿರಿ ದೇವ,
ಫಲವುಂಟು ಇಹಪರದಲ್ಲಿ

[ರಾಜನು ಮಿತಪರಿವಾರದೊಂದಿಗೆ ಮಾರಸಿಂಗಯ್ಯನ ಮನೆಯವರೊಡಗೂಡಿ ಶಾಂತಿಗ್ರಾಮಕ್ಕೆ ಬರುತ್ತಾನೆ. ಅಲ್ಲಿ ಧರ್ಮೇಶ್ವರನ ಗುಡಿಯ ಹೊರ ಅಂಗಣದಲ್ಲಿ ಶಾಂತಳೆಯ ವೀಣಾವಾದನವೂ ನೃತ್ಯವೂ ನಡೆಯುತ್ತದೆ]

ವಿಷ್ಣುವರ್ಧನ (ಸ್ವಗತ)

ಲಾವಣ್ಯದಲಿ ರತಿ, ಕಲಾ
ನೈಪುಣ್ಯದಲಿ ಭಾರತಿ,
ಆಗುವಳೆ ಎನ್ನ ಸತಿ !

ನೇಪಥ್ಯದಲ್ಲಿ—

‘ಪತಿಭಕ್ತಿ ಭವದ್ವಯಕಂ । ಹಿತಮೆಂಬುದನಱಿದು ವಿನಯದಿಂ ವಿಷ್ಣುಮಹೀ ।
ಪತಿಯಂ ಮೆಚ್ಚಿಸುತೆ ಮಹಾ । ಸತಿ ಶಾಂತಲದೇವಿ ಪಟ್ಟಮಂ ಧರಿಯಿಸಿದಳ್ ॥’

‘ಆ ನೆಗಟ್ದ ವಿಷ್ಣುನೃಪನ ಮ । ನೋನಯನಪ್ರಿಯೆ ಚಲಾಳಿನೀಲಾಳಕಿ ಚಂ-
ದ್ರಾನನೆ ಕಾಮನ ರತಿಯೊಳ್ । ತಾನೆಣೆ ತೊಣೆ ಸಂಸಮಾನೆ ಶಾಂತಲದೇವೀ ॥’

———

ದೃಶ್ಯ ೪

[ಬೇಲೂರಿನಲ್ಲಿ ಚೆನ್ನಕೇಶವ ದೇವಾಲಯ ಮುಗಿದಿದೆ. ಅರಸನೂ ಅರಸಿಯರೂ ರಂಗಮಂಟಪದಲ್ಲಿದ್ದಾರೆ. ಪ್ರತಿಷ್ಠೆಗೆ ಪೂರ್ವಭಾವಿಯಾಗಿ ಗೋಷ್ಠಿ ನೆರೆದಿದೆ.]

ನೇಪಥ್ಯ

'ಪ್ರಕಟಾಟೋಪದ ಚಕ್ರಗೊಟ್ಟದೊಡೆಯಂ ಸೋಮೇಶ್ವರಂ ಬಳ್ಕೆ ತ-
ನ್ನ ಕರಾಳಾಸಿಯ ಕೂರ್ಪನೇಂ ಮೆರೆದನೋ ಗೌಡಾಂಧಕಾರಪ್ರಚಂ-
ಡಕರಂ ಮಾಳವಮೇಘಜಾಳಪವನಂ ಚೋಳೋಗ್ರ ಕಾಳಾನಳಂ
ತ್ರಿಕಳಿಂಗತ್ರಿಪುರತ್ರಿಣೇತ್ರನದಟಂ ಶ್ರೀ ವಿಷ್ಣು ಭೂಪಾಳಕಂ ॥'

'ಸ್ಥಿರಮಾಗಿ ವಿಷ್ಣುವರ್ಧನ । ಧರಣೀಪಾಲಂಗೆ ಪಟ್ಟಮಾಗಲೊಡಂ ಸಾ-
ಗರದಂತನಹಿತಧರಣೀ । ಶ್ವರರೊಡನೆಯ್ದಿತ್ತು ವಿಶದಕೀರ್ತಿಪ್ರಸರಂ ॥'

'ಚೋಳನೃಪಾಳಪಾಂಡ್ಯನೃಪಕೇರಳಭೂಪಭುಜಾವಲೇಪ ವಿ-
ಸ್ಫಾಳನನಂಧ್ರಗಂಧಗಜಕೇಸರಿ ಲಾಟವರಾಟಧಾರಿಣೀ ॥

ಪಾಳಘನಾನಿಳಂ ಕದನಶೂರಕದಂಬವನಾಗ್ನಿ ವಿಷ್ಣುಭೂ-
ಪಾಳನವಾರ್ಯಶೌರ್ಯನಿಧಿಯಾತನ ಶೌರ್ಯಮನಾರೂ ಕೀರ್ತಿಪರ್ ||'

(ಪ್ರವೇಶ—ವಿಷ್ಣುವರ್ಧನ ಮತ್ತು ಶಾಂತಳೆ)

ವಿಷ್ಣುವರ್ಧನ

ದೇವದೇವನ ಬಲ್ಲಮಿಲ್ಲದಿರ್ದೊಡೆ
 ಮನುಷ್ಯಬಲಮೇಂ ಸಾರ್ಥಕಮೋ ?
ಮೂಲೋಕಮಂ ಮೀರಿ ಮೆರೆದರುಂ
 ಮುಕ್ಕಣ್ಣನಾಣತಿಯೆ ಮೇರೆಯಲ್ತೆ ।
ಕೇಶವನ ಕರುಣೆಯೇ ಕಾರಣಮಾಯ್ತು
 ನಮ್ಮಾ ವಿಜಯಸಂಪದಕೆ ನಿಜದಲ್ಲಿ ।
ನಿಮಿತ್ತನು ನಾನು, ನಾರಾಯಣನೆ ವಿಜಯಿ
 ವಿಜಯನಾರಾಯಣನೆಂದೆ ಕರೆಯುವಾ ಚೆಲುವ ಚೆನ್ನಿಗನನ್ನು ||

ಶಾಂತಳೆ

ಸಾರ್ಥಕವಾಯ್ತು ಸುರಪುರದ ಸೊಬಗು
ಸಂಗ್ರಾಮರಾಮಂಗೆ ವಿಜಯನಾರಾಯಣನೆ ಬೆಂಬಲವು ।

ಸಂಗ್ರಾಮದಾರ್ಭಟವು ಸರಿದೊಡೆ ದೇವ,
ದಿಗ್ವಿಜಯದಾವೇಶವಿಳಿದೊಡೆ, ಮರೆದೊಡೆ
ಸಿದ್ಧಿಯಲಿ ಸಾಧನೆಯ ಸಂಕಟವು, ತಾನಾಗಿ
ಶಾಂತಿಯಮೃತರಸಸೇಚನದಲ್ಲಿ ಸೇರುವುದು
ಸೌಮ್ಯನಾದನು ಶಿವಕೇಶವನು ಕಡೆಯಲ್ಲಿ !

ನಮ್ಮ ಜೀವನವ ನಡೆಸುವಾ ದೈವಕ್ಕೆ
ವಿಜಯನಾರಾಯಣನೊಂದು ಮುಖ
ಸೌಮ್ಯಕೇಶವನೆಂಬುದಿನ್ನೊಂದು ಮುಖ
ವಿಜಯನಾರಾಯಣಗೆ ಉತ್ಸವವು
ಆಡಂಬರದಲಂಕಾರ ಅರ್ಚನೆಗಳಿರಲಿ,
ಸೌಮ್ಯಕೇಶವನು ನಿರುದ್ವಿಗ್ನ ಗಂಭೀರ
ನಿರಾಭರಣಸುಂದರನುತ್ಸವವಿದೂರ
ಆವುವೆ ಶಾಂತಿಯ ನೆಲೆ, ಶಾಂತಳೆಯ ಬಯಕೆ
ಆದರಿರವೆ ಸೊಗಸು, ಮತ್ತಾವ ಸೊಬಗು ಬೇಕಿಲ್ಲ ಅದಕೆ

ಕಲ್ಲೊಳಗೆ ನೀರಿರ್ದು ಅದರೊಳಡಗಿಹ
ಕಪ್ಪೆ ತನ್ನಲೇ ತಾನಿರ್ದು ಅಲ್ಲಿ ಬೆಳೆದುಳಿದು
ನಿರಾತಂಕ ಶಾಂತಸುಖವನ್ನು ತೃಪ್ತಿಯನು
ಪಡೆವಂತೆ ಶಾಂತಿಯಲಿಹ ಜೀವ
ಎಂದೆಂದು ಸ್ವಾತ್ಮಾರಾಮ ಸುಖಿ !

ವಿಷ್ಣುವರ್ಧನ

ವಾಗ್ವಿಶಾರದೆಯೆ ನೀನು, ಮನದನ್ನೆ ಚೆನ್ನೆ !
ವಿಜಯನಾರಾಯಣಗೆ ಸೌಮ್ಯಕೇಶವನೆ ಜೋಡಿ
ಕರೆಸೀಗಳೇ ರೂವಾರಿಗಳ ಕಡೆಸುವೆನು
ಚೆನ್ನಕೇಶವನ ದಿವ್ಯಮೂರ್ತಿಯನು
ಕಪ್ಪೆಯುಪಮೆಯು ಸೊಗಸು
ನೀರಲ್ಲಿ ನೆಲದಲ್ಲಿ ಅದರ ಬದುಕು
ಅಂತೆಯೆ ಇಹಪರವೆರಡು ಜೀವದ ನೆಲೆ,
ಅರ್ಥದಲಿ ಧರ್ಮದಲಿ ಅದರ ಗೆಳೆತನ
ಸಿದ್ಧಿಯಲಿ ಸಾಧನೆಯಲಿ ಅದರ ಕಳೆ
ಸೌಮ್ಯಕೇಶವನೆ ಕಪ್ಪೆಚೆನ್ನಿಗರಾಯ !

[ಮುಂದೆ, ದೇಗುಲದ ಒಂದೇ ಸುತ್ತಾಲಯದಲ್ಲಿ ವಿಷ್ಣುವರ್ಧನ ರಾಜನಿಂದ ವಿಜಯನಾರಾಯಣನ ಮೂರ್ತಿಯೂ ಶಾಂತಳೆಯಿಂದ ಚೆನ್ನಕೇಶವಮೂರ್ತಿಯೂ ಪ್ರತಿಷ್ಠೆಗೊಳ್ಳುತ್ತವೆ]

ನೇಪಥ್ಯ

ವಿಷ್ಣುರ್ಜಿಷ್ಣುಮಹಿಪಾಲಃ
    ಪಾಲಿತಾಖಿಲಭೂತಲಃ |
ದೇವದೇವೇಶ, ವಿಜಯ-
    ನಾರಾಯಣಮಚೀಕರತ್ ||

ಶಾಂತಿಕೃತ್ಸರ್ವಭೂತಾನಾಂ
    ಪ್ರತಿಷ್ಠಾ ವಿಷ್ಣುಕಾಂತಯಾ |
ಚೆನ್ನಕೇಶವದೇವಸ್ಯ
    ಶಾಂತಿದೇವ್ಯಾ ಕೃತೋತ್ತಮಾ ||

ವಿಷ್ಣುವರ್ಧನ

ಓ ಮನದನ್ನೆ ತೀರಿತಿಂದೆನ್ನ ಮನದಾಸೆ !
ಕ್ಷಿತಿಯೊಳ್ ಪೆಸರ್ವೆತ್ತ ರುವಾರಿಗಳು
ನೆತ್ತರ ಸುರಿಸಿ ನಿರ್ಮಿಸಿದ ಈ ನೆಲೆಯು

ಅತಿಶಯರೂಪದಿಂದೂರ್ಜಿತವು ಲೋ-
ಕೋತ್ತರಲಾವಣ್ಯದೈಸಿರಿಯ ಕೈಗನ್ನಡಿಯು !
ಕಂತುಕಳಂಕಮಿಲ್ಲದ ಶೃಂಗಾರದ ಕಣಿ
ಭೂತಳದಿ ಏಕಾಶ್ಚರ್ಯಮಾಯ್ತು !

ಕಳಾವಿಳಾಸದ ವಿಭವಂ ತಾನಾಗಿ ಮೈವೆತ್ತು
ಇಳೆಯೊಳ್ ಗುಣಗಣಕ್ಕಾವಾಸಮೆನಿಸಿ ಬಂದೆ ಶಾಂ-
ತಳೆದೇವಿ ನಿನ್ನಂದದ ಪುತ್ಥಳಿಯಂ ದೇಗುಲದಂ-
ಗಳದೊಳ್ ಕಂಡರಿಸಿ ನಿಲಿಸಲೀ ರುವಾರಿಗಳು ಶಾಂ-
ತಳೆಯ ಬಿಟ್ಟಿಗನ ತೊಡರ್ಪಂ ಜಗಮೆಲ್ಲಂ ನೋಳ್ಗೆ !

ಶಾಂತಳೆ

ದೇವ, ಚೆನ್ನಿಗನ ಶ್ರೀರೂಪವೊಂದಚ್ಚರಿಯು, ವೈ-
ಭವದ ಆ ಮೂರ್ತಿಯಿಂದೆನ್ನ ಮೂರ್ತಿಯೇಂ ಚಲುವೆ ?
ದೇವನಿದಿರೊಳು ಮಾನವನ ಪೆರ್ಮೆಯೆ ? ಪೆಂಪೆ ?

ಆವಗುಣದೊಳೀದೇಗುಳವು ಭೂತಳದಿ ಪೊದಳ್ವುದೋ
ಆವದಾತಕಳಾವಿಳಾಸವಿನ್ಯಾಸವನೆ ರುವಾರಿಗಳು ನಿಲ್ಲಿಸಲಿ !

ದೇವನಾಣತಿಯಾದೊಡೀಗಳೆ ಲಾಸ್ಯಮಾಳ್ಪೆನು ದೇವಸನ್ನಿಧಿಯಲ್ಲಿ
ರುವಾರಿಗಳು ಕಂಡರಿಸಲೀ ನಾಟ್ಯಭಂಗಿಗಳ ಶಿಲೆಯಲ್ಲಿ !

[ವಿಜಯನಾರಾಯಣನ ದೇವಾಲಯದ ಮೊಗಸಾಲೆಯಲ್ಲಿ, ನೆರೆದ ಜನರೆದುರು ದೇವರ ಎದುರು ವಿಷ್ಣುವರ್ಧನರಾಜನೆದುರು ಶಾಂತಳೆಯೂ ನಾಲ್ಕೈದು ಸಖಿಯರೂ ನಾಟ್ಯವಾಡಲು ಸಿದ್ಧರಾಗುತ್ತಾರೆ.]

ದೃಶ್ಯ ೫

[ದ್ವಾರಸಮುದ್ರದಲ್ಲಿ ಅರಮನೆಯ ಅಂಗಳ   ವಿಷ್ಣುವರ್ಧನರಾಯನೂ ಶಾಂತಳಾದೇವಿಯೂ ಮಾತನಾಡುತ್ತ ಕೊಳ್ಳುತಿದ್ದಾರೆ.]

ವಿಷ್ಣುವರ್ಧನ ನಯನಕ್ಕೆ ಮನೋಹರಂ ಶ್ರುತಿಗೆ ಮಧುರಂ ಭಾವಕ್ಕೆ
ರಂಜಕಮಾಗಿರ್ದುದೀ ಲಾಸ್ಯಂ

ಶ್ರೀಯುದಯಂ ಸುರಸದನದೊಳ್ ಶಾಂತಳೆಯು ಪ್ರೌಢ-
ಹಿಂದೆ ಮದನಿಕೆಯರ್ ಕುಣಿದಾಡೆ ಹೃ-
ದಯ ಪ್ರದಂ ಉಜ್ಜ್ವಳಿಸಿ ತೊಡರ್ ಮುರಿದು ಆನಂ-
ದೋನ್ಮಾದದಾಘೂರ್ಣವಲಿ ರ-
ತಿಯುಂ ನೂರ್ಮಡಿ ಮಿಗುವಳ್ ಶಾಂತಳೆ ಇಳೆಗೆ ಕುಳ-
ಭವನಕೆ ಕಳಸಾಗಿ ಮೆರೆವಳ್ ||

ಅಪರಿನಗೊಂದು ಸಂದೇಹವು
ದೇಗುಲದ ನಾಟ್ಯದಲಿ ಪ್ರತಿಬಿಂಬಿ ಬರುವ ಈ ಶಿಲ್ಪ
ಅದರೊಳ್ ಬೆಳಗುವಗುರ್ವಿನ ಶಿಲ್ಪ
ಮುಂದೆಂದು ಕಾಣದಿಹ ಈ ಬೆಡಗು
ಬೇಡಲ್ಲಿ ಬಂದಿಹ ಕಾರಣವೇನೋ ?
ಅರಸನೋಲಗವು ಲಾಸ್ಯಕ್ಕೆ ಸಲ್ಲದೋ ?
ಸುರಭವನದೈಸಿರಿಯೆಲ್ಲ ವ್ಯರ್ಥವೋ ?

ಶಾಂತಳೆ

ಅಂತಲ್ಲ ದೇವ, ಕಲೆಗೆ ಲಕ್ಷ್ಯವಾತ್ಮೋನ್ನತಿಯು
ಎಂತಾದರೊಂದು ದಿನ ಕಲೆ ಅರಿಯಲೇಬೇಕಿದನು
ಸಂತಸದಿ ಕಳೆದ ಮೂವತ್ತು ವರುಷಗಳ ಬಾಳ-
ಚಿಂತನೆಯ ತರ್ಕವಿದು, ತೀರ್ಮಾನವಿದು ।

ಅರಮನೆಯ ವೈಭವದಿ ಇಂದ್ರಿಯಾರಾಮ
ಮೆರೆವುದಾತ್ಮನನು ವೈಮರೆಸಿ ಸಂಭ್ರಮದಿ
ಸುರೆಯ ಮದವಡರಿ ನಿಜರೂಪ ಕಳೆಗುಂದಿ
ಕರಿಯ ಲೇಶ್ಯೆಯನು ಪಡೆವುದಾತ್ಮ
    ಕಲೆಯ ನೆಲೆಯಲ್ಲ ಇದು ಜೀಯಾ
    ಓಲಗದ ಓಲಾಟದಲಿ ಆತ್ಮ
    ಮೇಲೇರಿ ಬರದು, ಮುಳುಗುವುದು ।
ದೇಗುಲದಲ್ಲಿ ಅದಕೆ ಆಸ್ಪದವಿಲ್ಲ
    ಪರಮಾರ್ಥಪಾತ್ರೆಯಲಿ ಕಲೆಯ ಮೇಲೋಗರವು
    ಪರಿಶುದ್ಧ ಭಾವದಲಿ ಬರಲಾತ್ಮ ಮೇಲೇರುವುದು

ಪರಮಾತ್ಮನಡಿದಾವರೆಯಲ್ಲಿ ದುಂಬಿಯೊಲು ಝೇಂ—
ಕರಿಸಿ ನಿಜಸುಖದಲೋಲಾಡುವುದು !

ವಿಷ್ಣುವರ್ಧನ ದಿನದಿನದ ಬಾಳಿನಲಿ ಕಲೆಗೆ ಬೆಲೆಯಿರದೆ
ಬಾನಿನಾಚೆಯ ಇರವಿಗೆಂದಿಹುದೆ ?
ಪರಮಾರ್ಥಕ್ಕೆ ಧರ್ಮ, ಲೌಕಿಕಕೆ ಕಲೆ
ಎರಡರಲಿಹ ಅಂತರವ ಮರೆಯಬಹುದೆ ?

ಶಾಂತಳೆ ಎರಡರೊಳು ಅಂತರವನೆಣಿಸುವುದು ಸರಿಯಲ್ಲ, ದೊರೆಯೇ
ಬೇರೆಂದು ಬಗೆವುದೇ ಕ್ಲೇಶಕಾಸ್ಪದವು
ಪರಮಾರ್ಥಕ್ಕೆ ಸಲ್ಲದುದು ಲೌಕಿಕಕು ಸಲ್ಲದು
ಹರನ ಮುಡಿಯಲಿಹ ಗಂಗೆ ನರರಿಗೂ ಮುಡಿಯಲ್ಲೆ !
ಪರಮಾರ್ಥವೇ ಲೌಕಿಕದುಸಿರು, ಬೇರು, ಫಲ
ಕಲೆಯು ಧರ್ಮಕ್ಕೆ ಆಸರೆಯು
ಧರ್ಮವೇ ಕಲೆಯ ಉಸಿರು
ಅನ್ಯೋನ್ಯದಾಶ್ರಯವು ಇದು
ಒಂದೆ ತಲೆ, ಮುಖಗಳೆರಡು !

ವಿಷ್ಣುವರ್ಧನ

ಪರಮಾರ್ಥದಲಿ ವಿರಕ್ತಿ, ಲೌಕಿಕದಲ್ಲಿ ಭೋಗ-
  ದಾಸಕ್ತಿ, ಎರಡು ಒಂದೆಂಬರಾರು ?
ಧರ್ಮದಲಿ ಫಲಿಸುವುದು ಪರಗತಿಯ ಮೇಲ್ಮೆ
ಕಲೆಯಲ್ಲಿ ಬೆಳಗುವುದು ಐಹಿಕದೊಲುಮೆ
ವಿಭಿನ್ನ ಲಕ್ಷ್ಯಗಳು, ವಿಭಿನ್ನ ಮಾರ್ಗಗಳು
ಹೆಣ್ಣು ಮಣ್ಣುಗಳ ಸಂಪರ್ಕವಿರದೊಡೆ ಕಲೆಯೆ ?
  ಸಂಪರ್ಕವಿರ್ದೊಡೇಂ ಧರ್ಮವಹುದೆ ?
ಶಾಂತಳೆಯ ಗಾನ, ಶಾಂತಳೆಯ ಲಾಸ್ಯವೆನಗೆ ಹಿತ
ಹೆಂಗಳೆಯ ಹೊನ್ನು ಮೈಚೆಲುವೆನ್ನ ಮನಕಾನಂದ
ಮೇಲಾವ ಈ ಕಲೆಯಿಂದೆನಗೆ ಸಂತೃಪ್ತಿ
  ಶಾಂತಿಯ ಬಯಕೆ ದೂರದ್ದು ಮನದನ್ನೆ
  ಬಾಳಿನಲಿ ಸುಖ, ಸಂಪದದೋಲಾಟ
  ಕಾಣುವುದೆ ಕಲೆಯ ನೇರಗುರಿ
  ಕಾಮನೆಯಿರದ ಕಲೆಗೆ ನೆಲೆಯುಂಟೆ ?

ಶಾಂತಳೆ

ಇದಕೊಡಂಬಡದು ನನ್ನಾತ್ಮ, ನಲ್ಲ !
ಬದುಕಿನಲಿ ಧರ್ಮವೇ ಕಲೆಯ ನೆಲೆ
ಕಾಮನೆಯ ಕೆಸರಿನಲಿ ಕಾಲ್ಜಾರಿದೊಡೆ
ಕಲೆಗೆ ನೆಲೆಯೆಲ್ಲಿಂದ, ಚಂದರ ಗಂಡ ?
ಮೈ ಚೆಲುವು ಚೆಲುವೆ ? ಶೃಂಗಾರದಲಿ ಸುಖವೆ ?
ಭೋಗದಲಿ ಶಾಂತಿಯ ಬಯಸುವುದು ತರವೆ ?
ಮರುಳಾಟಮೋಹಗಳಲಿ ಕಲೆಯ ಕಾಣುವಿರೆ
ಮರಳಲ್ಲಿ ನೀರ ಹಿಂಡುವೊಲು ವ್ಯರ್ಥ, ಅನರ್ಥ !

ವಿಷ್ಣುವರ್ಧನ

(ಸ್ವಗತ-ಚಿಂತಿಸುತ್ತ)
ಬೇಡಸಗೆ ಭೋಗಕ್ಕೆ ಬಗ್ಗದಾ ಕಲೆಯು
ಅದಕೇನು ರೂಪವೆ ? ರೀತಿಯೆ ? ರಂಗೆ ?
ಬರಿ ಬಯಲಲ್ಲಿ ಹಗ್ಗ ಹೊಸೆವಂತೆ ಮರುಳಾಟ !
ಶಾಂತಳೆಯ ಮನಸಿನಾಳದಲಿ ಈ ಮರುಳೆ ?
ಬಾಳಬಸಿರಲ್ಲಿ "ಈ" ಕನಸೆ "ರಸವೆ ?

....

ಸಂತಾನವಿಲ್ಲದಿರೆ ರಾಜ್ಯಕ್ಕೆ ನೆಮ್ಮದಿಯೆ ? ಗತಿಯೆ ?

(ಪ್ರಕಾಶ)
ಏನೆಂಬೆ ಲಕ್ಷ್ಮಿ ?

ಲಕ್ಷ್ಮಿ (ಸ್ವಗತ)
ಶಾಂತಳೆಯು ಸರಸತಿಯು ನಿಜದಲ್ಲಿ
ಶಾಂತಾತ್ಮಳಿವಳು ಮುನಿಜನ ಭಾವಿತಳು ಈ-
ಸಂಸ್ಕಾರಸಂಪತ್ತು ಬರಲುಂಟೆ ನ-
ನ್ನಂಥ ಪಾಮರಳಿಗೀ ಜನುಮದಲಿ ?
ಕಾಂತನೊಲುಮೆಯ ಬಲವೆ ನನ್ನ ಬಲ
ಸಂತಾನವಿಲ್ಲದೆ ಮರುಗುತಿಹ ನನ್ನೊಡೆಯ-
ನೆಂತಾದರೂ ಸಂತೈಸುವುದೆ ನನ್ನಯ ಧರ್ಮ !
(ಪ್ರಕಾಶ)
ಒಡೆಯನಾಣತಿಯೆ ಸರಿಯೆಂಬೆ, ದೇವ,
ಬಡತನವೆಮಗೆ ಅಧ್ಯಾತ್ಮತತ್ತ್ವನಿಶ್ಚಯದಲ್ಲಿ

ಹೆಂಗಳೆಯರು ನಾವು, ಪತಿಯ ಪೂಜಕರು
ಸಂಬಂಧವಿಲ್ಲೆಮಗೆ ಮಿಗಿಲಾದ ತತ್ವಗಳಲಿ !

ವಿಷ್ಣುವರ್ಧನ

ದಿಟವನೆ ನುಡಿದೆ, ಮಾಲಕುಮಿ,
ತತ್ತ್ವಗಳ ಸಂಬಂಧವೆಮಗು ಬಲು ದೂರ !
ರಣರಂಗದಲಿ ಕಾದಾಡಿ, ಹಗೆಗಳನೆ ಹತ್ತಿಕ್ಕಿ
ರಾಜ್ಯವನೆ ಕಟ್ಟಿ, ಪ್ರಜೆಗಳನು ಕಾಪಿಟ್ಟು
ಸಂತೈಸುವುದೆ ಅರಸರ ಧರ್ಮ
ಅದಕನುಗುಣವಹ ಪರಮಾರ್ಥ
ಸಂಗತವಷ್ಟೆ, ಅಧಿಕಪ್ರಸಂಗಕೆಡೆಯಿಲ್ಲ !
ಕ್ಷಾತ್ರತೇಜಕ್ಕೆ ಕಾಮಸುಖವಿಲ್ಲದಿರೆ ಸೊಗಸೆ ?

ಶಾಂತಳೆ

(ಏಕಾಂತವಾಗಿ ಲಕ್ಷ್ಮಿಗೆ)
ತಂಗಿ ಮಾಲಕುಮಿ ನೀನೆನ್ನ ಒಡನಾಡಿ; ನಿರ್ಮ-
ಲಾಂತಃಕರಣದ ಪುಣ್ಯಮೂರ್ತಿಯು ನೀನು, ಬೇರಲ್ಲ !

ಅರಸಿಗಾದರದ ಔತಣವ ನೀನುಣಿಸು
ಬರಿದೆ ಬಳಲಿಸಿದೆನು ಮನದನ್ನ ಬಿಟ್ಟಿಗನ !
ಮರುಮರೀಚಿಕೆಯಾಯ್ತೆಮ್ಮ ದಾಂಪತ್ಯ
ಇರುಳಲ್ಲಿ ಕುರುಡಾಗಿ ಅರಸಿದ ಇದ್ದಿಲಾಯ್ತು ಸಂತಾನ !
ಹೊಯ್ಸಳೇಶ್ವರನ ಶ್ರೀವಂಶವೂರ್ಜಿತವಾಗುವುದು ನಿನ್ನಿಂದ
ಕಣ್ಗೊಪ್ಪಿ, ಮನದುಂಬಿ, ಸಂತೈಸು ಅರಸನನು ಲಕ್ಷ್ಮಿ
ಪಟ್ಟಮಹಾದೇವಿ ಬಿಟ್ಟಿಗನ ಭಾಗ್ಯಲಕ್ಷ್ಮಿ !

ದೃಶ್ಯ ೬

[ಶ್ರವಣಬೆಳ್ಗೊಳದ ಕಳ್ವಪ್ಪು. ಗಂಧವಾರಣ ಬಸದಿಯ ಕೆಲಸ ಪೂರೈಸಿ, ಶಾಂತಿನಾಥಜಿನನ ಪ್ರತಿಷ್ಠಾಕಾರ್ಯಕ್ಕೆ ಸಿದ್ಧತೆಯಾಗಿದೆ. ದ್ವಾರಸಮುದ್ರದಿಂದ ವಿಷ್ಣುವರ್ಧನರಾಯನೂ, ಪಟ್ಟಮಹಿಷಿ ಲಕ್ಷ್ಮಿಯೂ ಬಂದಿದ್ದಾರೆ. ಶ್ರವಣಬೆಳ್ಗೊಳದಲ್ಲಿಯೇ ಉಪಾಸಿಕೆಯಾಗಿ ಉಳಿದಿರುವ ಶಾಂತಳೆ ಒಂಟಿಯಾಗಿ ಬಾಳನ್ನು ಕಳೆಯುತ್ತಿದ್ದಳು.]

(ಸ್ವಗತ)

ಶಾಂತಳೆ

ಬಸಿರನೆತ್ತರಸುರಿಸಿ ಮಾಡಿದಾ ಬಯಕೆ ಬಯಲಾಯ್ತು
ಬಿಟ್ಟಿಗನಿಗೆನ್ನಿಂದ ಸಂತಾನಸೌಭಾಗ್ಯವಿಲ್ಲವಾಯ್ತು
ಬರಿದೆ ಆಡಂಬರವಾಯ್ತೆನ್ನ ಬರಡು ಬದುಕು !
ಆತಂಕದಲಿ ಬೆಂಡಾದವಗೆ ಪರಮಾರ್ಥಮೇಂ
ಸೊಗಯಿಪುದೆ ?
ಪೊಗಸಿರಿ ಲಕ್ಷ್ಮಿ ಮಾಲಕ್ಷ್ಮಿ ಮೆಚ್ಚಿಸಲವನ
ವರ್ಧಿಸಲಿ ವಂಶವನು, ಬೆಳಗಿಸಲಿ ಬಾಳನ್ನು !

(ವಿಷ್ಣುವರ್ಧನ, ಲಕ್ಷ್ಮೀದೇವಿಯರು ಬರುತ್ತಾರೆ)

ಇದುವೆ ಅನುಕೂಲ ದಾಂಪತ್ಯ,
ಚಕೋರಚಂದ್ರಮರಂತೆ ಲಕ್ಷ್ಮಿಬಿಟ್ಟಿಗರು !

ಶಾಂತಳೆಯ ಬಿಟ್ಟಗಸು ಮರೆಯ–
ನೆಂಬಾತಂಕವಿತ್ತೆನಗೆ ದಿಟವಾಗಿ !
ಹೊರೆಯಿಳಿದು ಹಗುರವಾಯ್ತೆನ್ನ ಹೃದಯ
ಅರಸುವೆನು ದೃಢದಿಂದ ಚರಮಶಾಂತಿಯನು
ಶಾಂತಿನಾಥನ ಚರಣಕಮಲದೊಳು ಎಡಬಿಡದೆ !

(ಸ್ವಗತ)

ವಿಷ್ಣುವರ್ಧನ ಸುಕುಮಾರಿ ಶಾಂತಳೆಯು ಕಡುನೋಂಪಿಗಳ ನಡೆಸುತ್ತ
ಸೊರಗಿಹಳು, ಆ ರೂಪದೈಸಿರಿಯು ಮರೆಯಾಗಿಹುದು !
ಎತ್ತಣದ ಅರಮನೆ, ಎತ್ತಣದ ಬಸದಿ ?
ಇದ್ದೆಲ್ಲ ವೈಭವವ ಕಿತ್ತೊಗೆದು ಬಂದು ನೆಲೆಸಿದಳಿಲ್ಲಿ !
ಈ ಬೋರುಬಂಡೆಯೆ ಶಯ್ಯೆ, ತಲೆದಿಂಬು ಕೈಯೆ
ಅವರಿವರಿತ್ತ ಕೂಳೆ ಜೀವಕಾಧಾರ
ಒಂದಾದಮೇಲೊಂದು ವ್ರತವೆ ಏಕಾಕಾರ
ಏನಿದು ಮರುಳೆ, ಇದುವೆ ಬಾಳಿನ ತಿರುಳು ?

(ನೋಡುತ್ತ–ಲಕ್ಷ್ಮಿಗೆ, ಆಶ್ಚರ್ಯದಿಂದ)

ಜಗದ ಜಂಜಡದಿಂದ ದೂರಾಗಿಹಳು
ಕಣ್ಗಳಲಿ ಶಾಂತಿ, ಮೊಗದಲ್ಲಿ ಶಾಂತಿ
ಅಂಗಭಂಗಿಗಳಲಿ ಪ್ರಶಮರತಿ !
ಅಂಗನೆಯೋ ದೇವತೆಯೋ ಈ ಸಾಧ್ವಿ ?
ಶಾಂತಳೆಯು ಈ ಲೋಕದವಳಲ್ಲ, ಲಕ್ಷ್ಮಿ !

(ಇಬ್ಬರೂ ಬಳಿಗೆ ಬಂದು ಶಾಂತಳೆಗೆ ನಮಸ್ಕರಿಸುತ್ತಾರೆ)

ಶಾಂತಳೆ

ಏನಿದು ಒಡೆಯ ? ಉಚಿತವೇ ಪ್ರಣಾಮ
ಕೈಹಿಡಿದ ಕಾಮಿನಿಗೆ ? ದೂರಾದ ಮಾನಿನಿಗೆ ?
ರಾಯರು ನೀವು, ದಾಸಿಯಲ್ಲವೆ ನಾನು ?

ವಿಷ್ಣುವರ್ಧನ

ಜಗಧ ಜಂಜಡದಿಂದ ದೂರಾಗಿ
ಭವದ ಬಂಧನವನೆಲ್ಲ ಕಿತ್ತೊಗೆದು

ಇಳೆಯ ಕೆಳಗಿರಿಸಿ ಮೇಲೇರಿ ನಿಂತೆ
ನಿನಗಿಂದು ದೊರೆಯಾರು ? ಸರಿಯಾರು ?

(ಪ್ರಭಾಚಂದ್ರರು ಬರುತ್ತಾರೆ)

ಪ್ರಭಾಚಂದ್ರ

ಕುಶಲವೇ ರಾಯಂಗೆ ? ದೇವಿಯರಿಗೆ ?
ಕಂಡಿರೇ ನಿಮ್ಮುಪಾಸಿಕೆಯ ತಪಶ್ಚರ್ಯೆ ?
ಜಿನಧರ್ಮನಿರ್ಮಳೆಯು ಶಾಂತಳೆ
ಅವಳಿಷ್ಟಜಿನಮೂರ್ತಿ ಶಾಂತಿನಾಥನ
ಬಸದಿ–ಸುತ್ತಾಲಯವೆಲ್ಲ ಮುಗಿದಿಹುದು,
ಅಣಿಯಾಗಿಹುದು ಪುತ್ಥಳಿಯ ಪ್ರತಿಷ್ಠೆಗೆಲ್ಲ.
ದಯಮಾಡಿ ದೇಗುಲದ ಅಂಗಳಕೆ
ಮೂರುತವ ಸಾಧಿಸುವ ಭರದಿಂದ !

(ಎಲ್ಲರೂ ಕೂಡಿ ಬಸದಿಗೆ ಹೋಗುವರು. ಮೂರ್ತಿಯ ಪ್ರತಿಷ್ಠೆಯಾಗುತ್ತದೆ. ವಿಗ್ರಹದ ಪಾದಪೀಠದಲ್ಲಿರುವ ಬರಹವನ್ನು ವಿಷ್ಣುವರ್ಧನನು ಓದಿ ಕೃತಪಡಿಸುತ್ತಾನೆ.)

'ಪ್ರಭಾಚಂದ್ರ ಮುನೀಂದ್ರಸ್ಯ ಪದಪಂಕಜ ಷಟ್ಪದಾ ।
ಶಾಂತಲಾ ಶಾಂತಿ ಜೈನೇಂದ್ರ ಪ್ರತಿಬಿಂಬಮಕಾರಯತ್ ॥'

(ಪ್ರಭಾಚಂದ್ರರು ಇನ್ನೊಂದು ಸಾಲನ್ನು ಓದುತ್ತಾರೆ)

'ರಾಜತೇ ರಾಜಸಿಂಹೀವ ಪಾರ್ಶ್ವೇ ವಿಷ್ಣುಮಹೀಭೃತಃ ।
ವಿಖ್ಯಾತಾ ಶಾಂತಳಾಖ್ಯಾ ಸಾ ಜಿನಾಗಾರಮಕಾರಯತ್ ॥'

ಲಕ್ಷ್ಮಿ (ವಿಷ್ಣುವರ್ಧನನನ್ನು ಕುರಿತು)
ಹೆಸರೇನು ಬಸದಿಗಿಟ್ಟಿರಿ, ಜೀಯಾ ?

ವಿಷ್ಣುವರ್ಧನ (ಗುರುಗಳ ಕಡೆ ನೋಡುತ್ತ)
ಶಾಂತಿನಾಥನ ಬಸದಿಯಲ್ಲವೆ ?

ಲಕ್ಷ್ಮಿ ಶಾಂತಿನಾಥನು ನಿಮಿತ್ತಮಾತ್ರ
ಅಕ್ಕ ಶಾಂತಳೆಯ ಬಸದಿಯಿದು !

ಪ್ರಭಾಚಂದ್ರ ದೇವಿಯರ ಮಾತು ದಿಟ

ಲಕ್ಷ್ಮಿ — ನಾನವಳ ಸವತಿ, ಸದ್ವೃತ್ತಿಯವಳು, ಉದ್ವೃತ್ತಿ ನಾನು
ನನ್ನಂಥ ಸವತಿಗವಳು ಉದ್ವೃತ್ತಗಂಧವಾರಣೆಯೆ !
ಗಂಧವಾರಣಬಸದಿಯೆಂದರದು ಚೆನ್ನು

ವಿಷ್ಣುವರ್ಧನ — ಶಾಂತಳೆಯೊಪ್ಪಿದರೆ ಸರಿಯೆ.

ಪ್ರಭಾಚಂದ್ರ — ಚೆಲುವಾದ ಹೆಸರು, ಮನೋಜ್ಞಮಧುರ
ಧ್ಯಾನಮದವೇರಿದಾನೆ ಭವದಂಕುಶಕೆ ಬಗ್ಗದು !
ಸವತಿಗಂಧವಾರಣೆಯಲ್ಲ, ಸಮಾಧಿಗಂಧವಾರಣೆ,
ಸಂಸಾರವೇ ವೃತ್ತವೆಂದರಿದು ಉದ್ವೃತ್ತ ಸರಿಯೆ !

ಶಾಂತಳೆ — ಶಾಂತಿನಾಥಾಲಯಕೆ ಶಾಂತಳೆಯ ಹೆಸರೆ ?
ಲಕ್ಷ್ಮಿಯಂಥ ಸವತಿಯಿರೆ ನಾನು ಗಂಧವಾರಣೆಯೆ ?
ಉದ್ವೃತ್ತಿಯೆಂದು ಗುರು ನನಗಾಡಿದುದು ಸರಿಯೆ
ತಾನುದ್ವೃತ್ತಿಯೆಂದುದೂ ಸರಿ, ಲಕ್ಷ್ಮಿಯುದಾರವೃತ್ತಿ !

ಪ್ರಭಾಚಂದ್ರ — ಲಕ್ಷ್ಮಿಯಕ್ಕರೆಯ ಹೆಸರಿರಲಿ, ಶಾಂತಳೆ !

(ಶಾಂತಳೆ ತಲೆಬಾಗುವಳು. ಎಲ್ಲರೂ ಪ್ರಭಾಚಂದ್ರರಿಗೆ ಮಣಿದು ತೆರಳುವರು. ಪ್ರಭಾಚಂದ್ರರ ನಿರ್ಗಮನ)

ಶಾಂತಳೆ

(ಒಬ್ಬಳೇ, ಸ್ವಗತ)

ತೀರಿತಿಂದೆನ್ನ ಮನದಾಸೆ, ಇಬ್ಬಗೆಯ ಹಿರಿಯಾಸೆ—
ಶಾಂತಿನಾಥನ ಬಸದಿ, ಬಿಟ್ಟಿಗನ ನೆಮ್ಮದಿ
ಇನ್ನೆನಗಿಲ್ಲವಾತಂಕ, ಜಾರಿದುವು ಭಾರಗಳು !
ಭಟ್ಟಾರರಾಣತಿಯಂತೆ ಕೈಗೊಂಬೆ ನಿಶ್ಚಿಂತೆಯಲಿ
ಸಲ್ಲೇಖಸನ್ಯಸನವಿಧಿಯಂ ಸಮಚಿತ್ತದಲಿ
ಜಿನಸಮಯ ಸಮುದಿತ ಪ್ರಕಾರದಲಿ
ಜಿನಪದಸ್ತೋತ್ರಕ್ರಿಯಾನಿಷ್ಠೆಯಲಿ
ಜಿನಸತ್ಪುಣ್ಯಪುರಾಣಸಂಶ್ರವಣದಲಿ,
ಜಿನನಾಥ ತನಗೆಂದುಂ ಆಪ್ತನೆಂದು
ಮನಸಾರೆ ಸಂತೋಷವನೆ ತಾಳ್ದು.
ಭದ್ರಬಾಹುಗುಹೆಯೆದುರು ಸಮಾಧಿಶಿಲೆ
ಅಲ್ಲಿ ನಡೆಯಲೆನ್ನ ಕಡೆಯ ನೋಂಪಿ !
ನೋಂಪಿಯಲಿ_ನಿಂತಂದು ಕದಲುವುದು ಚೆನ್ನಲ್ಲ
ತಂದೆತಾಯಿಯರನೀಗಳೇ ಕಂಡುಬರುವುದೊಳಿತು

ಬಂದಿಹುದು ಶಿವಗಂಗೆಯಲಿಹರು ಆವರೆಂದು ಸುದ್ದಿ
ಚಂದಲೆಯೊಡಗೂಡಿ ಹೊರಡುವೆನು ನಾನಿಂದು.

ದೃಶ್ಯ ೭

(ಶಿವಗಂಗೆಯ ತೀರ್ಥದಲ್ಲಿ ಸ್ನಾನಮಾಡಿ ಬರುವಾಗ, ತಿಂಗಳು ಉಪವಾಸವಿದ್ದು ಬೆಳಗೊಳದಿಂದ ನಡೆದುಬಂದಿದ್ದ ಶಾಂತಳೆ ನಿತ್ರಾಣಳಾಗಿ ಆಯತಪ್ಪಿ ಮಲಗುವಳು. ಅವಳೊಡನೆ ಬಂದಿದ್ದ 'ಚಂದಲೆಯೂ, ತಾಯಿ ಮಾಚಿಕಬ್ಬೆಯೂ ಬಳಿಯಲ್ಲಿ ಇರುವರು)

ಶಾಂತಳೆ

ಚಂದಲೆಯೆ ಬಿಸಿಯಿರದು ಪ್ರೈಯುಸಿರು
ಸಂದಿತೀಗಳೆ ಆಯುಷ್ಯವೆನಗೆ ಬರೆದಿದ್ದು,
ತಂದೆತಾಯಿಯರ ಕಂಡು ಬೀಳ್ಕೊಂಡುದಾಯ್ತು
ಪಂಚಪದ ಜಿನೇಂದ್ರನಂ ಸ್ಮರಿಸುತ್ತ........

(ಕಣ್ಣು ಮುಚ್ಚುವಳು)

ಮಾಚಿಕಬ್ಬೆ	ಮಗಳೆ, ಜಿನಧರ್ಮನಿರ್ಮಳೆ, ಶಾಂತಳೆ ! ದುರ್ಧರಸನ್ಯಸನದೋಳ್ ನೋಂತು ಸೌಖ್ಯಸ್ಥಳಾದೆ ಸಮಚಿತ್ತದೊಳು ! ನಿನ್ನನು ಹೆತ್ತ ತಾಯ್ತಂದೆಗಳ ಪುಣ್ಯ—
ಮಾರಸಿಂಗಯ್ಯ	ಹಾ ಮಗಳೆ, ಬಂದಾಯ್ತು, ಸಂದಾಯ್ತು ! ಶಿವಶಿವಾ, ಒಡಲಲ್ಲಿ ಕಡಲಂಥ ಸಿಡಿ— (ಎಂದೊರಗಿ ತೀರಿಕೊಳ್ಳುವನು)
ಮಾಚಿಕಬ್ಬೆ	(ನೀರವವಾಗಿ) ಈ ಭವದ ಪರಿಯಚ್ಚರಿಯು ಸನ್ಯಸನಸಮಾಧಿಯೊಳ್ ಮಗಳು ಮಗಳತಿಶಯಪ್ರೀತಿಯೊಳ್ ತಂದೆ ಸ್ವರ್ಗತರಾಗೆ ನಾನುಳಿದೇನು ಚೆನ್ನ ? ಈ ಕ್ಷಣಟ ಸಲ್ಲೇಖನವ ಕೈಗೊಂಡೆ ಅನಶನವ್ರತದಿ ಭವದಬ್ಬರವಣಗಲೆಂದು !

ಚಂದಲೆ — ಸಲ್ಲೇಖನವ ಮಾಡುವಿರೆ ತಾಯಿ,
ದಯಮಾಡಿ ಬೆಳಗೊಳಕೆ !
ಗವಿಯೆದುರ ಸಮಾಧಿಶಿಲೆಯಲ್ಲಿ
ಸುರಗತಿಯು ಸೇರುವುದೆಂದು
ಶಾಂತಳೆಗಿತ್ತು ಹೆಬ್ಬಯಕೆ !
ಶೀರಿಸಿರಿ ನೀವದನು ನೋಂತು
ಭಟ್ಟಾರರಾಣತಿಯಲ್ಲಿ ನಿಂತು !

ಮಾಚಿಕಬ್ಬೆ — ಶಾಂತಳೆಯ ಸಂಕಲ್ಪ ಸಾಧಿಸುವ ಪುಣ್ಯ ಎನಗಾಯ್ತು
ಅಂತಃಕರಣದ ಋಣವಿಂದು ಹರಿಯುವಂತಾಯ್ತು
ಚಂದಲೆಯೆ, ತೆರಳುವಾ ಬೆಳ್ಗೊಳಕೆ ಬೆಳಗಾಗೆ !

(ನೇಪಥ್ಯದಲ್ಲಿ) 'ಅರಸಿ ಸುರಗತಿಯುನಯ್ದಿದಳಿರಲಾಗೆನಗೆಂದು
ಬೆಂದು ಬೆಳಗೊಳದಲು ದುರ್ದ್ಧರಸನ್ಯಸನದಿಂ
ಪರಿಣತೆ ತಾಯಿ ಮಾಚಿಕಬ್ಬೆ ತನುಂ ತೊರೆದಳ್ ||'
'ಒಂದು ತಿಂಗಳುಪವಾಸದೊಳಿಂಬಿನೆ ಸುರಗತಿಗೆಯ್ದಿದಳು
ಸಕಳಭವ್ಯರ ಸನ್ನಿಧಿಯೊಳ್ ಸಮಾಧಿಯಿಂ ||'



ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ(ರಿ)

೩೦೫, ೭ನೇ ಅಡ್ಡರಸ್ತೆ, ೧ನೇ ಹಂತ, ಜಯನಗರ, ಬೆಂಗಳೂರು ೫೬೦೦೧೧

ಪ್ರೊ. ಸಾ. ಕೃ. ರಾಮಚಂದ್ರರಾಯರ ಕೆಲವು ಪ್ರಮುಖ ಕೃತಿಗಳು:

೧. ಭಾರತದ ದೇವಾಲಯ, ನೆಲೆ-ಹಿನ್ನೆಲೆ (ರು. ೭೫)

೨. ಬೋಧಿಯ ಬೆಳಕಿನಲ್ಲಿ-ಬುದ್ಧನ ಬಾಳು, ಬೆಳಕು (ರು. ೧೦೦)

೩. ಶ್ರೀ ಪುರಂದರ ದಾಸರು (ರು. ೭೦)

೪. ಶ್ರೀ ಶಾರದಾ ಪೀಠದ ಮಾಣಿಕ್ಯ, (ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳ ಜೀವನ ಚರಿತ್ರೆ)(ರು. ೧೨೦)

೫. ಮೂರ್ತಿ ಶಿಲ್ಪ, ನೆಲೆ-ಹಿನ್ನೆಲೆ (ರು. ೪೦೦)

೬. ಪೂರ್ಣ ಪ್ರಜ್ಞ ಪ್ರಶಸ್ತಿ- ಶ್ರೀ ಮಧ್ವಾಚಾರ್ಯರ ಬಾಳು ಮತ್ತು ಬೆಳಕು (ರು. ೮೦)

೭. ವೇದದಲ್ಲಿನ ಕಥೆಗಳು (ರು. ೬೦)

ಬೆಲೆ: ರು. ೫೦/-